

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

Volume : 07 | Issue : 49 | Saturday 26-10-2024 | E-mail : maruti.b.hosamani76@gmail.com | Page: 4 | Price : Rs. 1/-


## ಕನ್ನಡ ಶಾಲೆ ಮತ್ತು ಭಾಷೆ ಉಳಿವಿಗಾಗಿ ಡಾ. ವಿಷ್ಣುವರ್ಧನ್– ಅಭಿಮಾನಿ ದ್ವಿಚಕ್ರ ವಾಹನದ ಮೂಲಕ ರಥಯಾತ್ರೆ





**ಸಿಹಿ ಕಹಿ ಸುದ್ದಿ**

**ಕೊಟ್ಟೂರು** : ಕನ್ನಡ ಭಾಷೆ, ನೆಲ ಜಲ ಕುರಿತು ಅರಿವು ಮೂಡಿಸಲು ಬೆಂಗಳೂರಿನಿಂದ ಬೀದರ್ ವರೆಗೂ ಸ್ಕೂಟರಿನಲ್ಲಿ ಹೊರಟಿರುವ ಜ್ಯೂನಿಯರ್ ವಿಷ್ಣುವರ್ದನ್ ಎಂದೇ ಹೆಸರು ಮಾಡಿರುವ, ವಿಷ್ಣುವರ್ಧನ್ ಅಪ್ಪಟ ಅಭಿಮಾನಿ ನಾಗಬಸಯ್ಯ ಮಲ್ಲಯ್ಯ ಮಳಲಿಮಠ ಅವರು ಖಾನಾ ಹೊಸಹಳ್ಳಿ, ನಿಂಬಳಗೆರೆ, ಗಾಣಗಟ್ಟೆ , ಉಜ್ಜಯಿನಿ ಹಾಗೂ ಕೊಟ್ಟೂರು ಪಟ್ಟಣಕ್ಕೆ ಭೇಟಿ ನೀಡಿದರು. ಈ ವೇಳೆ ಗ್ರಾಮದ ಮುಖಂಡರು ಹಾಗೂ ವಿಷ್ಣು ಅಭಿಮಾನ ಬಳಗದ ಸದಸ್ಯರು ಅವರನ್ನು ಸ್ವಾಗತಿಸಿ, ಸನ್ಮಾನಿಸಿ ಬಿಳ್ಕೊಟ್ಟರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕನ್ನಡ ನಾಡು ನುಡಿ ಸಂಸ್ಕೃತಿ ಕುರಿತು ಅರಿವು ಮೂಡಿಸುವ ಕೆಲಸ ಮಾಡುತ್ತಿರುವೆ. ನನ್ನ ಕಾರ್ಯಕ್ಕೆ ಎಲ್ಲರೂ ಸಹಕಾರ ನೀಡುತ್ತಿದ್ದಾರೆ. ವಿಷ್ಣು ಅಭಿಮಾನಿಯಾಗಿ ನನ್ನ ಕರ್ತವ್ಯವನ್ನು ನಾನು ಮಾಡುತ್ತಿರುವೆ ಎಂದರು. ಇವರು ಬಂದ ಸಂದರ್ಭದಲ್ಲಿ ವಿಷ್ಣು ಅಭಿಮಾನಿಗಳು ಸೇರಿ ಅನೇಕರು ಶುಭ ಹಾರೈಸಿ ಬೀಳ್ಕೊಟ್ಟರು.

ರಾಣೇಬೆನ್ನೂರು ತಾಲ್ಲೂಕಿನ ಐರಣಿ ಗ್ರಾಮದವರಾದ ನಾಗಬಸಯ್ಯ ಹತ್ತು ವರ್ಷಗಳಿಂದ ಪ್ರತಿ ಅಕ್ಟೋಬರಲ್ಲಿ ತಮ್ಮ ದ್ವಿಚಕ್ರ ವಾಹನದ ಮೂಲಕ ನಾಡಿನಾದ್ಯಂತ ಸಂಚರಿಸುವ ಅವರು, ಕನ್ನಡ ಭಾಷೆ, ನೆಲ, ಜಲ ಸಂರಕ್ಷಣೆ ಮಾಡುವ ಕುರಿತು ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಸದ್ಯ ಬೆಂಗಳೂರಿನಲ್ಲಿ ಖಾಸಗಿ ನೌಕರಿಯಲ್ಲಿರುವ ನಾಗಬಸಯ್ಯ ಅವರು ತಮ್ಮದೇ ಆಕ್ಟೀವಾ 3 ಜಿ. ಸ್ಕೂಟರ್ನ ಕನ್ನಡ ಬಾವುಟ, ತೋರಣಗಳಿಂದ ಸಿಂಗರಿಸಿ, ಭುವನೇಶ್ವರಿ ಮತ್ತು ವಿಷ್ಣು ಚಿತ್ರಗಳನ್ನು ಅಳವಡಿಸಿ ಕೊಂಡು ಕನ್ನಡ ರಥವನ್ನಾಗಿಸಿ ಕೊಂಡಿ–ದ್ದಾರೆ. ವಿಷ್ಣು ಅವರ ವೇಷ ಭೂಷಣ ತೊಟ್ಟು ಆಕರ್ಷಿಸುತ್ತಾರೆ. ವಿಷ್ಣು ಅಭಿಮಾನಿಗಿರುವ ಇವರು ಅನೇಕ ಕಡೆ ಜ್ಯೂ. ವಿಷ್ಣುವಾಗಿ ಕಾರ್ಯಕ್ರಮಗಳನ್ನು ನೀಡಿ ಅದರಿಂದ ಬಂದ ಹಣವನ್ನು ಇಂತಹ ಜಾಗೃತಿಗಾಗಿ ಬಳಕೆ ಮಾಡುತ್ತಿದ್ದಾರೆ.

ಈ ರೀತಿ ಸಂಚಾರ ಕೈಗೊಂಡಾಗ ಅನೇಕ ನಗರ ಪಟ್ಟಣಗಳಲ್ಲಿ ಪೊಲೀಸರು ಅವರ ವಾಹನಕ್ಕೆ ಪೆಟ್ರೋಲ್ ಖರ್ಚು ನೀಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅನೇಕ ವಿಷ್ಣುವರ್ಧನ್ ಅಭಿಮಾನಿಗಳು ಎಲ್ಲಾ ಗ್ರಾಮಗಳಿಂದ ಸ್ವಾಗತವನ್ನು ಮಾಡಿದರು. ಗಡ್ಡೇರ ರವಿಕುಮಾರ, ನಾಗರಾಜ, ಮಂಜುನಾಥ, ಉಜ್ಜಯಿನಿ ರವಿಕುಮಾರ ಗ್ರಾಮ ಪಂಚಾಯತಿ ಸದಸ್ಯರು, ಪ್ರಕಾಶ, ನೀರಗಂಟಿ ಮಾರಪ್ಪ, ಕೊಟ್ಟೂರು ರುದ್ರೇಶ್, ಮಲ್ಲಿಕಾರ್ಜುನ, ವಿಷ್ಣುವರ್ಧನ್ ಅರಕ್ಷಕರು, ರಮೇಶ್ ಕಾನಹೊಸಹಳ್ಳಿ ಅನೇಕ ಅಭಿಮಾನಿಗಳು ಜೊತೆಗೂಡಿ ಮುಂದಿನ ಪ್ರಯಾಣ ಸುಖಕರವಾಗಿರಲಿ ಎಂದು ಹಾರೈಸಿದರು.

**ತಾಲೂಕ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ**
**ಹಾಗೂ**
**ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಪ್ರದೀಪ್.ಕುಮಾರ್.ಸಿ.**
**ಕೊಟ್ಟೂರು**

## ದ.ಸಂ.ಸ ಕಾರ್ಯಕರ್ತರಿಗೆ ತರಬೇತಿ ಶಿಬಿರಗಳ ಮೂಲಕ ಜಾಗೃತಿ ಗೊಳಿಸಬೇಕು: ಎಂ.ವಿ ಭವಾನಿ



**ಸಿಹಿ ಕಹಿ ಸುದ್ದಿ**

**ತುಪ್ಪುರು** : ದಲಿತ ಚಳುವಳಿಗೆ ಸೇರಿದ ಪ್ರತಿಯೊಬ್ಬರು ಮನಸ್ಸಿಟ್ಟು ಯಾವುದೇ ಕೆಲಸ ಮಾಡಿದರೆ ಯಶಸ್ಸು ಕಾಣುತ್ತಿವೆ ಎಂದು ಕರ್ನಾಟಕ ದಲಿತ ಮಹಿಳಾ ಒಕ್ಕೂಟದ ರಾಜ್ಯ ಸಂಘಟನಾ ಸಂಚಾಲಕಿಯಾದ ಎಂ.ವಿ ಭವಾನಿ ರವರು ಹೇಳಿದರು. ಅವರು ಗುರುವಾರ ಸಂಜೆ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಮೇಗುಂದ ಹೋಬಳಿ ತುಪ್ಪುರು ಗ್ರಾಮದಲ್ಲಿ ಏರ್ಪಡಿಸಿದ್ದ ದಲಿತ ಸಂಘರ್ಷ ಸಮಿತಿ ಮತ್ತು ಕರ್ನಾಟಕ ದಲಿತ ಮಹಿಳಾ ಒಕ್ಕೂಟದ ನೂತನ ಗ್ರಾಮ ಶಾಖ ರಚನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಘಟನೆಯ ಕಾರ್ಯಕರ್ತರಿಗೆ ಮತ್ತು ನಾಯಕತ್ವ ವಹಿಸಿರುವ ನಾಯಕರುಗಳಿಗೆ ಕಾರ್ಯಾಗಾರ ಹಾಗೂ ತರಬೇತಿ ಶಿಬಿರಗಳ ಮೂಲಕ ನಾಯಕತ್ವ ಮತ್ತು ಅರಿವು ಮೂಡಿಸುವ ಕೆಲಸ ಮಾಡಬೇಕು ಎಲ್ಲರೂ ಸಹ ಒಗ್ಗಟ್ಟಿನಿಂದ ಇದ್ದರೆ ನಾವು ಯಾವುದೇ ರೀತಿಯ ಸಮಸ್ಯೆಯಾದರೂ ಎದುರಿಸಬಹುದು ಒಗ್ಗಟ್ಟಿನಲ್ಲಿ ಬಲವಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಹಾತ್ಮ ಪ್ರೊ.ಬಿ ಕೃಷ್ಣಪ್ಪ ಸ್ಥಾಪಿತ ರಿಜಿಸ್ಟರ್ ನಂಬರ್ 386 /2020 –21, ಸಂಘಟನೆಯ ತುಪ್ಪುರು ಗ್ರಾಮ ಶಾಖೆ ರಚನೆ ಮಾಡಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿದರು. ಗ್ರಾಮ ಶಾಖೆ ಸಂಚಾಲಕರಾಗಿ ಚರಣ್ ಕುಮಾರ್, ಸಂಘಟನಾ ಸಂಚಾಲಕರಾಗಿ ಸುನಿಲ್, ಸಂಘಟನಾ ಸಂಚಾಲಕರಾಗಿ ಸುನಿಲ, ಖಜಾಂಚಿಯಾಗಿ ಪ್ರದೀಪ್,

ಹಾಗೂ ಮೇಗುಂದ ಹೋಬಳಿ ಸಂಚಾಲಕರಾಗಿ ಉಮೇಶ್ ರವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಹಾಗೂ ಕರ್ನಾಟಕ ದಲಿತ ಮಹಿಳಾ ಒಕ್ಕೂಟದ ನೂತನ ಸಂಚಾಲಕರಾಗಿ ಜ್ಯೋತಿ ರೇಷನ್, ಸಂಘಟನಾ ಸಂಚಾಲಕಿಯಾಗಿ ಸವಿತಾ ಟಿ, ಹಾಗೂ ಭಾಗ್ಯ, ಖಜಾಂಚಿಯಾಗಿ ಶೋಭಾ ಹಾಗೂ ಮೇಳಗುಂದ ಹೋಬಳಿ ಮಹಿಳಾ ಒಕ್ಕೂಟದ ಸಂಚಾಲಕೆಯಾಗಿ ಜಾನಕಿ ರವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ಸುದ್ದಿ ಯಾಗಿರುತ್ತದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ**
**ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎನ್. ವೆಂಕಟೇಶ್. ತರೀಕೆರೆ.ಚಿಕ್ಕಮಗಳೂರು**

## 'ಕಾಂಗ್ರೆಸ್ ಕುಟುಂಬ': ಬೂತ್ ಮಟ್ಟದಿಂದ ಪಕ್ಷ ಬಲಪಡಿಸೋಣಾ

**ರಬಕವಿ–ಬನಹಟ್ಟಿ** : ಬೂತ್ ಮಟ್ಟದಲ್ಲಿ ಪಕ್ಷ ಬಲಪಡಿಸಲು ಕೆಪಿಸಿಸಿ 'ಕಾಂಗ್ರೆಸ್ ಕುಟುಂಬ' ಹೊಸ ಉಪಕ್ರಮವನ್ನು ಪ್ರಾರಂಭಿಸಿದೆ. ಇದರಂಗವಾಗಿ ಪ್ರತಿ ಬೂತ್‌ನಲ್ಲಿ 50 ಪಕ್ಷದ ಕಾರ್ಯಕರ್ತರನ್ನು ಗುರ್ತಿಸಿ ದಾಖಲಿಸುವದು. ಪಕ್ಷದ ಎಲ್ಲಾ ಚಟುವಟಿಕೆಗಳು ಒಳಗೊಂಡಿದ್ದು ಈಗಾಗಲೇ ರಾಜ್ಯದಲ್ಲಿ ಯಶಸ್ವಿ ಕಾಣುತ್ತಿದ್ದು, ಇನ್ನುಳಿದ ಬೂತ್‌ಗಳಲ್ಲಿಯೂ ಈ ಕಾರ್ಯ ಶೀಘ್ರ ಜಾರಿಯಾಗಬೇಕೆಂದು ವಿಧಾನಪರಿಷತ್ ಸದಸ್ಯ ಸನೀಲಗೌಡ ಪಾಟೀಲ ಹೇಳಿದರು.



ರಬಕವಿಯ ಶಿವದಾಸಿಮಯ್ಯ ಸಮುದಾಯ ಭವನದಲ್ಲಿ ಕಾಂಗ್ರೆಸ್ ಮುಖಂಡರ ಹಾಗು ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪಕ್ಷವನ್ನು ತಳಮಟ್ಟದಲ್ಲಿ ಬಲಪಡಿಸಲು ಕಾಂಗ್ರೆಸ್ ಈ ಹೊಸ ಯೋಜನೆ ಹಾಕಿಕೊಂಡಿದ್ದು, ಬೂತ್ ಮಟ್ಟದಲ್ಲಿ ಪಕ್ಷದ ಕಾರ್ಯಕರ್ತರನ್ನು ಕಟ್ಟಿ ಬೆಲೆಸಬೇಕು. ಸರ್ಕಾರ ಕೇವಲ 4 ವರ್ಷವಲ್ಲ 10 ವರ್ಷದ ಸರ್ಕಾರ, ಈಗಿನಿಂದಲೇ ಇದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು. ಮುಖಂಡರು ಹಾಗು ಕಾರ್ಯಕರ್ತರು ಈಗಿನಿಂದಲೇ ಸಿದ್ಧತೆ ನಡೆಸಿ ತೇರದಾಳ ಕ್ಷೇತ್ರವನ್ನೂ ಕಾಂಗ್ರೆಸ್ ತೆಕ್ಕೆಗೆ ಪಡೆಯಲು ಯಾವ ರೀತಿ ಕಾರ್ಯ ಮಾಡಬೇಕೆಂಬುದನ್ನು ಸುನೀಲಗೌಡ ಪಾಟೀಲ ಹೇಳಿದರು.

ಈಗಾಗಲೇ ತೇರದಾಳ ಕ್ಷೇತ್ರದಲ್ಲಿ ಶಾಸಕ ಸ್ಥಾನವಿಲ್ಲದಿದ್ದರೂ 2 ಪುರಸಭೆ ಹಾಗು 10 ಕ್ಕೂ ಅಧಿಕ ಗ್ರಾಮ ಪಂಚಾಯಿತಿಗಳು ಕಾಂಗ್ರೆಸ್ ಆಡಳಿತದಲ್ಲಿವೆ. ಇಷ್ಟೊಂದು ಕಾರ್ಯ ನಡೆಸುವಲ್ಲಿ ಪಕ್ಷದ ಮುಖಂಡ ಸಿದ್ದು ಕೊಣ್ಣೂರ ನೇತೃತ್ವದಲ್ಲಿ ಮುಖಂಡರು ಹಾಗು ಕಾರ್ಯಕರ್ತರ ಶ್ರಮಕ್ಕೆ ಅಭಿನಂದಿಸಿದರು.

ಸರ್ಕಾರ ನಿಮ್ಮೊಂದಿಗೆ ಇದೆ. ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವ ಮೂಲಕ ಪ್ರತಿಯೊಬ್ಬ ಪ್ರಜೆಯ ಕಾಳಜಿಯ ಕಾಂಗ್ರೆಸ್ ಪಕ್ಷದ್ದಾಗಿದೆ ಎಂದರು.

ಸಿದ್ದು ಕೊಣ್ಣೂರ ಮಾತನಾಡಿ, ಪಕ್ಷ ಬಲವರ್ಧನೆಗೆ ರಾಜ್ಯ ಹಾಗು ಜಿಲ್ಲಾ ಮುಖಂಡರ ಸಹಾಯವಿದೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪರ ತೇರದಾಳ ಕ್ಷೇತ್ರದ ಜನತೆ ಹಾತೊರೆಯುತ್ತಿದ್ದು, ಇದಕ್ಕೆ ಪೂರಕವಾದ ಸಹಾಯ–ಸಹಕಾರ ರಾಜ್ಯದ ಮುಖಂಡರಿಂದಾಗಬೇಕೆಂದರು.

ಭೀಮಶಿ ಮಗದುಮ್, ನೀಲಕಂಠ ಮುತ್ತೂರ, ಮಲ್ಲಪ್ಪ ಸಿಂಗಾಡಿ, ಲಕ್ಷಣ ದೇಸಾರಟ್ಟಿ, ದೇವಲ ದೇಸಾಯಿ, ಬಸವರಾಜ ಕೊಕಟನೂರ, ಹರ್ಷವರ್ಧನ ಪಟವರ್ಧನ, ಸಂಗಪ್ಪ ಕುಂದಗೋಳ, ಗೌತಮ ರೋಡಕರ, ನೀಲೇಶ ದೇಸಾಯಿ, ರೇಣುಕಾ ಮಡ್ಡಿಮನಿ, ಎಸ್. ಎಂ. ಪಾಟೀಲ, ರಂಗನಗೌಡ ಪಾಟೀಲ, ಅನೀಲ ಬೀಳಗಿ, ಬರಮು ಉಳ್ಳಾಗಡ್ಡಿ, ಪಿಂಟು ಕುಂಬಾರ, ರವಿ ಚನ್ನಬಸನ್ನವರ, ಕಿರಣ ಕರಲಟ್ಟಿ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

## ಕರುನಾಡ ಯುವಜನ ವೇದಿಕೆ ವತಿಯಿಂದ ವಾಲ್ಮೀಕಿ ಜಯಂತಿ ಆಚರಣೆ



**ಕೆ ಆರ್ ಪೇಟೆ** : ತಾಲೂಕಿನ ಮಾಧ್ಯಮ ಸ್ಟುಡಿಯೋ ಕಛೇರಿಯಲ್ಲಿ ರಾಮಾಯಣ ಮಹಾಕಾವ್ಯವನ್ನು ರಚಿಸಿದ ಮಹಾನ್ ಋಷಿಗಳಾದ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಬಿಜಿಎಸ್ ಕಾಂಪ್ಲೆಕ್ಸ್ ನಲ್ಲಿರುವ ಮಾಧ್ಯಮ ಸ್ಟುಡಿಯೋ ಕಛೇರಿಯಲ್ಲಿ ಕರುನಾಡು ಯುವಜನ ವೇದಿಕೆಯ ಜಿಲ್ಲಾಧ್ಯಕ್ಷರಾದ ಎಸ್. ರವಿ, ಜಿಲ್ಲಾ ಉಪಾಧ್ಯಕ್ಷರಾದ ಜಿ.ಪಿ.ರಾಜು , ತಾಲ್ಲೋಕು ಅಧ್ಯಕ್ಷರಾದ ಶ್ಯಾಮ್ ಸುಂದರ್, ಮಹಿಳಾ ತಾಲ್ಲೂಕು ಘಟಕದ ಅಧ್ಯಕ್ಷರಾದ ಧನಲಕ್ಷ್ಮೀ, ಕಾರ್ಯಾಧ್ಯಕ್ಷರಾದ ಸುನೀಲ್ ಕುಮಾರ್ ರವರ ನೇತೃತ್ವದಲ್ಲಿ ಪುಷ್ಪಾರ್ಚನೆ ಸಲ್ಲಿಸಿ ಸಿಹಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷರಾದ ಲೋಕೇಶ್.ವಿ, ಜಿಲ್ಲಾಧ್ಯಕ್ಷರಾದ ಎಸ್. ರವಿ, ಜಿಲ್ಲಾ ಉಪಾಧ್ಯಕ್ಷರಾದ ಜಿ.ಪಿ.ರಾಜು, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷರಾದ ಸಾಯಿಕುಮಾರ್, ತಾಲ್ಲೋಕು ಅಧ್ಯಕ್ಷರಾದ ಶ್ಯಾಮ್ ಸುಂದರ್,ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷರಾದ ಧನಲಕ್ಷ್ಮೀ,ಕಾರ್ಯಾಧ್ಯಕ್ಷರಾದ ಸುನೀಲ್ ಕುಮಾರ್,ಶಶಿ, ಯುವರಾಜ್, ಸುಂದರೇಶ್, ರಂಗನಾಥ್, ರಂಜಿತಾ ಸೇರಿದಂತೆ ಮತ್ತಿತರು ಭಾಗವಹಿಸಿದ್ದರು.

**ವರದಿ: ಎಸ್ ರವಿ**
**ಹೊನ್ನೇನಹಳ್ಳಿ**

## ಉದ್ಯೋಗಂ ಮಾನವ ಲಕ್ಷಣಂ: ಆರ್ಥಿಕ ಸಭಲತೆಗೆ ಉದ್ಯೋಗವೇ ಮುಖ್ಯ ಆಯುಧ: ಕೆ.ಎಂ. ಜಾನಕಿ

**ಬಾಗಲಕೋಟೆ** : ಉದ್ಯೋಗಂ ಪುರಷ ಲಕ್ಷಣಂ ಇದ್ದ ನಾಣ್ನುಡಿ ಇಂದು ಉದ್ಯೋಗಂ ಮಾನವ ಲಕ್ಷಣಂ ಆಗಿದ್ದು, ಆರ್ಥಿಕ ಸಭಲತೆಗೆ ಉದ್ಯೋಗವೇ ಮುಖ್ಯ ಆಯುಧವಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಂ.ಜಾನಕಿ ಹೇಳಿದರು.

ಅವರು ಬಿ.ವಿ.ವಿ.ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯ ಬಾಗಲಕೊಟೆ, ಐಕ್ಯೂಎಸಿ ಘಟಕ,ಪ್ಲೇಸ್ಮೆಂಟ್ ಶೇಲ್ ಹಾಗೂ ಸಮರ್ಥನಂ ಅಂಗವಿಕಲ ಸಂಸ್ಥೆ ಬೆಳಗಾವಿ, ಜಿಲ್ಲಾ ಉದ್ಯೋಗ ವಿನಿಮಯ ಘಟಕದ ಸಹಯೋಗದಲ್ಲಿ ಶುಕ್ರವಾರ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಭಾ ಭವನದಲ್ಲಿ ನಡೆದ ಉದ್ಯೋಗಮೇಳವನ್ನು ಉದ್ಘಾಟಿಸಿ ಮಾತನಾಡಿದರು.





ವಿದ್ಯೆಗೆತಕ್ಕಉದ್ಯೋಗಬಹುಮುಖ್ಯವಾಗಿದ್ದು, ವಿದ್ಯ ಜ್ಞಾನದ ಅರಿವು ನೀಡುತ್ತದೆ, ಜೊತೆಗೆ ಒಂದು ಉದ್ಯೋಗ ಸಿಕ್ಕರೆ ಮನುಷ್ಯನ ಬದುಕು ಪರಿಪೂರ್ಣತೆ ಕಡೆ ಸಾಗುತ್ತದೆ, ಆ ನಿಟ್ಟಿನಲ್ಲಿ ಈ ಉದ್ಯೋಗಮೇಳ ಅತ್ಯುತ್ತಮ ಕಾರ್ಯಕ್ರಮವಾಗಿದೆ. ಉದ್ಯೋಗಂ ಮಾನವ ಲಕ್ಷಣಂ ಆಗಿದೆ, ಉದ್ಯೋಗದಿಂದ ಮನುಷ್ಯನ ಗೌರವ ಹೆಚ್ಚುತ್ತದೆ, ಬಂದಿರುವ ಉದ್ಯೋಗಾಕಾಂಕ್ಷಿಗಳಿಗೆ ಒಳ್ಳೆಯ ಉದ್ಯೋಗ ಸಿಗಲಿ, ಉದ್ಯೋಗದಾತರಿಗೂ ಒಳ್ಳೆದಾಗಲಿ. ಇಲ್ಲಿ ವಿಶೇಷಚೇತನರಿಗೆ ಹೆಚ್ಚಿನ ಅವಕಾಶ ಕಲ್ಪಿಸಿದ್ದು ಧನಾತ್ಮಕ ಹೆಜ್ಜೆಯಾಗಿದೆ. ಬಸವೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಸಮರ್ಥನಂ ಸಂಸ್ಥೆ ಒಳ್ಳೆಯ ಸದಾವಕಾಶವನ್ನು ನಿರ್ಮಿಸಿರುವುದು ಶ್ಲಾಘನೀಯವಾಗಿದೆ. ವಿಶೇಷ ಚೇತನರಲ್ಲಿ ಇಚ್ಛಾಶಕ್ತಿ ಮತ್ತು ಒಳಗೊಳ್ಳುವಿಕೆ ತುಂಬಾನೆ ಇರುವುದರಿಂದ ಅವರನ್ನು ನಾವೆಲ್ಲರು ಮುಕ್ತ ಮನಸ್ಸಿನಿಂದ ಅವಕಾಶಗಳನ್ನು ಕಲ್ಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಸಿದ್ದ ಮಾಜಿ ಶಾಸಕರು ಹಾಗೂ ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರು ಮಾತನಾಡಿ ವಿಶೇಷಚೇತರು ಬಹಳ ಪ್ರತಿಭಾವಂತರಾಗಿರುತ್ತಾರೆ. ಈ ಉದ್ಯೋಗಮೇಳದಲ್ಲಿ 200ಕ್ಕೂ ಹೆಚ್ಚು ವಿಶೇಷಚೇತನರು 300ಕ್ಕೂ ಹೆಚ್ಚು ಇತರರು ಭಾಗವಹಿಸಿರುವುದುಹೆಮ್ಮೆವಿಷಯವಾಗಿದೆ. ಯಾವುದೆ ಉದ್ಯೋಗ ಸಿಕ್ಕರೂ ಅದರಲ್ಲಿ ಕಾರ್ಯನಿರ್ವಹಿಸಿರಿ. ಜೀವನದ ಯಶಸ್ವಿಗೆ ನಾವು ನಮಗೆ ಸಿಕ್ಕ ಮೊದಲ ಉದ್ಯೋಗದಲ್ಲಿ ಮುಂದುವರೆಯಬೇಕು. ಅದರಿಂದ ಬೇಳವಣಿಗೆಯನ್ನು ಕಾಣಬಹುದಾಗಿದೆ. ಮೊದಲಿನಿಂದಲೂ ನಮ್ಮ ಸಂಘದ ಶಿಶುವಿಹಾರದಲ್ಲಿ ವಿಶೇಷಚೇತನರಿಗಾಗಿ ಶಾಲೆಯನ್ನು ತೆರೆಯಲಾಗಿದೆ. ಅವರಿಗೆ ನಮ್ಮ ಸಹಕಾರ ಇರುತ್ತದೆ ಎಂದರು.

ವೇದಿಕೆ ಮೇಲೆ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಸಮರ್ಥನಂ ಅಂಗವಿಕಲರ ಸಂಸ್ಥೆಯ ಅರುಣಕುಮಾರ ಎಂ.ಜಿ, ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಆಡಳಿತಾಧಿಕಾರಿ ಡಾ.ವಿಜಯಕುಮಾರ ಕಟಗಿಹಳ್ಳಿಮಠ, ಪ್ರಾಚಾರ್ಯ ಎಸ್.ಆರ್.ಮುಗನೂರಮಠ, ಐಕ್ಯೂಎಸಿಸಂಯೋಜಕರಾದಡಾ.ಎ.ಯು. ರಾಠೋಡ, ಎಸ್.ವಿ,ಕಟ್ಟಿ ಸೇರಿದಂತೆ ಅನೇಕರು ಇದ್ದರು.ಕಾರ್ಯಕ್ರಮದಲ್ಲಿ ಶ್ರೇಯಾ ಜೋರಾಪುರ ಪ್ರಾರ್ಥಿಸಿದರು, ಎಸ್. ಡಿ. ಕೆಂಗಲಗುತ್ತಿ ಕಾರ್ಯಕ್ರಮ ನಿರೂಪಿಸಿದರು.

ಉದ್ಯೋಗ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ: ಉದ್ಯೋಗಮೇಳಕ್ಕೆ ಉದ್ಯೋಗದಾತ ಸಂಸ್ಥೆಗಳುಮತ್ತುಉದ್ಯೋಗಾಕಾಂಕ್ಷಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ರಾಜ್ಯಾದಂತ ಇರುವ ಸುಮಾರು 36 ಸಂಸ್ಥೆಗಳು ಮೇಳದಲ್ಲಿ ಪಾಲ್ಗೊಂಡಿದ್ದು ಸಾವಿರಕ್ಕು ಹೆಚ್ಚು ಜನ ಆಕಾಂಕ್ಷಿಗಳು ಸಂದರ್ಶನಕ್ಕೆ ಹಾಜರಾಗಿದ್ದರು.



**ಮೂಡಲಗಿ** : ಪಟ್ಟಣದ ಚೆನ್ನಮ್ಮ ವೃತ್ತದಲ್ಲಿ ಕಿತ್ತೂರು ಉತ್ಸವದ ಸಂಭ್ರಮದ "ವೀರ ಜ್ಯೋತಿ" ರಥಕ್ಕೆ ತಾಲೂಕಾಡಳಿತ ಮತ್ತು ಪಟ್ಟಣದ ಎಲ್ಲ ಸಮಾಜ ಬಾಂಧವರು ಅದ್ದೂರಿಯಾಗಿ ಸ್ವಾಗತ ಮಾಡಿಕೊಂಡರು. 1824–ಅಕ್ಟೋಬರ್, 23ರಂದು ಬ್ರಿಟಿಷರ ವಿರುದ್ಧ ಜಯಗಳಿಸಿದ ನೆನಪಿಗಾಗಿ ಪ್ರತಿ ವರ್ಷವೂ ಅಕ್ಟೋಬರ್,23 ರಿಂದು ಮೂರು ದಿನಗಳು ಅದ್ದೂರಿಯಾಗಿ ಕಿತ್ತೂರಿನಲ್ಲಿ ಉತ್ಸವ ನಡೆಯುತ್ತದೆ ವಿಜಯೋತ್ಸವದ ನೆನಪಿಗಾಗಿ "ವೀರ ಜ್ಯೋತಿ" ಬಹುತೇಕ ನಾಡಿನ ತುಂಬ ಸಂಚರಿಸಿ ಮೂಡಲಗಿ ಪಟ್ಟಣಕ್ಕೆ ಆಗಮಿಸಿತು. 200 ನೆಯ ವಿಜಯೋತ್ಸವದ ವರ್ಷಾಚರಣೆಯ.ತಾಲೂಕಾ ಪಂಚಮಸಾಲಿ ಅಧ್ಯಕ್ಷ ಬಸವರಾಜ ಪಾಟೀಲ,ನಗರ ಘಟಕದ ಅಧ್ಯಕ್ಷ ಬಸವರಾಜ ರಂಗಾಪೂರ, ತಹಶಿಲ್ದಾರ ಶಿವಾನಂದ ಬಬಲಿ ತಾಲೂಕಿನ ಅಧಿಕಾರಿಗಳು ಗಣ್ಯರು ಅದ್ದೂರಿಯಾಗಿ ಸ್ವಾಗತಿಸಿ, ಬಿಳ್ಕೊಟ್ಟರು.

# ಕಿತ್ತೂರು ಚೆನ್ನಮ್ಮ ವಿಜಯಜ್ಯೋತಿ ಯಾತ್ರೆಗೆ ಅದ್ದೂರಿ ಸ್ವಾಗತ



**ವಿಜಯಪುರ :** ಕಿತ್ತೂರು ರಾಣಿ ಚೆನ್ನಮ್ಮ 200ನೇ ಜಯಂತಿ ನಿಮಿತ್ತ ಕಿತ್ತೂರು ಚೆನ್ನಮ್ಮ ವಿಜಯಜ್ಯೋತಿ ಯಾತ್ರೆ ರಥ ಮಂಗಳವಾರ ವಿಜಯಪುರಕ್ಕೆ ಆಗಮಿಸಿತು. ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ವಿಜಯಜ್ಯೋತಿ ರಥಕ್ಕೆ ಸ್ವಾಗತಿಸಿ ಪೂಜೆಯನ್ನು ನೇರವೇರಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ, ಜಿಲ್ಲಾ ಪಂಚಾಯತಿ ಮುಖ್ಯ ಯೋಜನಾಧಿಕಾರಿ ನಿಂಗಪ್ಪ ಗೋಠೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಬಿ.ಎಮ್ ಪಾಟೀಲ, ಸಮಾಜದ ಮುಖಂಡರುಗಳಾದ ಹರೀಶಗೌಡ ಪಾಟೀಲ, ಪ್ರಭುಗೌಡ ಪಾಟೀಲ, ಸಂಜುಗ-ೌಡ ಪಾಟೀಲ, ನಿಂಗನಗೌಡ ಪಾಟೀಲ, ನಿಂಗಪ್ಪ ಸಂಗಾಪುರ, ಬಸವರಾಜ ಬಾಗೇವಾಡಿ, ಮಹಾದೇವಿ ಗೋಕಾಕ,

ಲಲಿತಾ ಬಿರಾದಾರ, ಬಸಮ್ಮ ಗುಜರಿ, ಜ್ಯೋತಿ ಪಾಗದ, ಶೋಭಾ ಬಿರಾದಾರ, ಶರಣಬಸು ಗಂಗಶೆಟ್ಟಿ, ಅಡಿವೆಪ್ಪ ಸಾಲಗಲ್ಲ,

ಶ್ರೀಶೈಲ ಮುಳಜಿ, ದೇವೇಂದ್ರ ಮೀರೆಕರ, ದಾನೇಶ ಆವಟಿ,

ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಕನಕಗಿರಿ: ಮ್ಯಾನ್ಯೂಯಲ್ ಸ್ಕ್ಯಾವೆಂಜರಗಳ ಮರು ಸಮೀಕ್ಷೆ

**ಕೊಪ್ಪಳ :** ಕನಕಗಿರಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಅನೈರ್ಮಲ್ಯ ಶೌಚಾಲಯಗಳು ಹಾಗೂ ಮ್ಯಾನ್ಯೂಯಲ್ ಸ್ಕ್ಯಾವೆಂಜರಗಳ ಮರು ಸಮೀಕ್ಷೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಪಟ್ಟಣ ಪಂಚಾಯತ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿಯಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 324/2020ರ ತೀರ್ಪಿನನ್ವಯ ಕನಕಗಿರಿ ಪ.ಪಂ. ವ್ಯಾಪ್ತಿಯಲ್ಲಿ ಅನೈರ್ಮಲ್ಯ ಶೌಚಾಲಯಗಳು ಹಾಗೂ ಮ್ಯಾನ್ಯೂಯಲ್ ಸ್ಕ್ಯಾವೆಂಜರಗಳ ಮರು ಸಮೀಕ್ಷೆಯನ್ನು ಅ.19 ರಿಂದ 25ರ ವರೆಗೆ ಪ.ಪಂ. ವ್ಯಾಪ್ತಿಯಲ್ಲಿ ಹಮ್ಮಿಕೊಂಡಿದ್ದು, ಮ್ಯಾನ್ಯೂಯಲ್ ಸ್ಕ್ಯಾವೆಂಜರಗಳ ನೇಮಕಾತಿ ನಿಷೇದ ಮತ್ತು ಅವರ ಪುನರ್ವಸತಿ ಅಧಿನಿಯಮ-2013 ಕಾಯ್ದೆ ಹಾಗೂ ನಿಯಮಗಳ ಪ್ರಕಾರ ಯಾವುದೇ ವ್ಯಕ್ತಿ ನೈರ್ಮಲ್ಯ ರಹಿತ ಶೌಚಾಲಯ ಅಥವಾ ತೆರೆದ ಚರಂಡಿಗಳಲ್ಲಿ ಮಾನವನ ಮಲ ಮೂತ್ರವನ್ನು ದೈಹಿಕವಾಗಿ ಸ್ವಚ್ಛಗೊಳಿಸುವವರು ಕಂಡುಬಂದಲ್ಲಿ ಪ.ಪಂ.ಯಲ್ಲಿ ನೋಂದಣಿ ಮಾಡಿಕೊಳ್ಳಲಾಗುವುದು. ನೊಂದಣಿಗಾಗಿ ಅಗತ್ಯ ದಾಖಲಾತಿಗಳನ್ನು ನೀಡಬೇಕು. ಹೆಚ್ಚಿನ ಮಾಹಿತಿಗಾಗಿ ಪ.ಪಂ ಕಾರ್ಯಾಲಯದ ಆರೋಗ್ಯ ಶಾಖೆಯನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಭಾರತೀಯ ನೈಜ ಸಂಸ್ಕೃತಿ ಇಂದಿಗೂ ಅಜರಾಮರ



**ತಾಳಿಕೋಟೆ :** ಧರ್ಮ ಪ್ರಜ್ಞೆ ಹಾಗೂ ಭಾರತೀಯ ನೈಜ ಸಂಸ್ಕೃತಿ ಇಂದಿಗೂ ಈ ನೆಲದಲ್ಲಿ ಊರ್ಜಿತಗೊಳ್ಳುತ್ತಿದ್ದರೆ ಅದಕ್ಕೆ ಕಾರಣ ಇಲ್ಲಿನ ಅಸಂಖ್ಯಾತ ಮಠ ಮಾನ್ಯಗಳು ಮತ್ತು ಧರ್ಮಗುರುಗಳ ಸಮರ್ಥ ನೇತೃತ್ವ ಅಲ್ಲದೇ ಪ್ರಾಚೀನ ಋಷಿ ಮುನಿಗಳು ಹಾಗೂ ಮಧ್ಯಯುಗದ ಸಾಧಕರು ಹಾಕಿಕೊಟ್ಟಿರುವ ಸತ್ಯತೆಯಿಂದಲೇ ನಮ್ಮನ್ನು ಮುನ್ನಡೆಸುತ್ತಿರುವ ಗುರು ಸಮೂಹ ಎಲ್ಲ ಬಗೆಯ ಆಕ್ರಮಣಗಳನ್ನು ಹಿಮ್ಮೆಟ್ಟಿಸುವಲ್ಲಿ ಸಫಲರಾಗಿದ್ದಾರೆಂದು ಶ್ರೀ ಖಾಸ್ಗತೇಶ್ವರ ಮಠದ ಉಸ್ತುವಾರಿಯಾದ ವೇ.ಮುರುಘೇಶ ವಿರಕ್ತಮಠ ಅವರು ತಿಳಿಸಿದ್ದಾರೆ.

ಇತ್ತೀಚಗೆ ಅಫಜಲಪೂರದ ರಾಜ್ಯದ ಪ್ರಮುಖ ಮಠಗಳಲ್ಲಿ ಒಂದಾದ ಶ್ರೀಗುರು ಮಳೇಂದ್ರ ಶಿವಾಚಾರ್ಯ ಸಂಸ್ಥಾನ ಹಿರೇಮಠಕ್ಕೆ ಬೆಟ್ಟಿ ನೀಡಿ ಅಲ್ಲಿಯ ಶ್ರೀ ಷ.ಬ್ರ.ವಿಶ್ವರಾಧ್ಯಮಳೇಂದ್ರ ಶಿವಾಚಾರ್ಯರಿಗೆ ನಮಸ್ಕರಿಸಿ ಅವರು ಭಕ್ತೋದ್ದಾರ, ಜನೋದ್ದಾರಕ್ಕಾಗಿ ಇತ್ತೀಚಗೆ ಕೈಕೊಂಡ ದುಶ್ಚಟಗಳಿಂದ ದೂರಿಕರಿಸುವ ವಿಚಾರ ಹಾಗೂ ಭಕ್ತರನ್ನು ಉದ್ದರಿಸುವ ಕಾರ್ಯಕ್ಕೆ ಮುಂದಾಗಿರುವದನ್ನು ಶ್ರೀಗಳ ಮುಂದೆ ಬಣ್ಣಿಸಿದ ಅವರು ಶ್ರೀಗಳ ಕಾರ್ಯ ವೈಖರ್ಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ತಮ್ಮ ಮಠಕ್ಕೆ ಶ್ರೀಖಾಸ್ಗತೇಶ್ವರ ಮಠದ ಉಸ್ತುವಾರಿ ವೇ.ಮುರುಘೇಶ ವಿರಕ್ತಮಠ ಅವರು ಆಗಿಮಿಸಿದ್ದಾರೆಂಬುದರ ಕುರಿತು ಸಂತಸ ವ್ಯಕ್ತಪಡಿಸಿದ ಶ್ರೀ ಷ.ಬ್ರ.ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯ ಮಹಾ ಸ್ವಾಮಿಗಳು ಶ್ರೀ ಖಾಸ್ಗತೇಶ್ವರ ಮಠದ ಇತಿಹಾಸ ಬಿಚ್ಚಿಟ್ಟರಲ್ಲದೇ ಇತ್ತೀಚಗೆ ವೇ. ಮುರುಘೇಶ ವಿರಕ್ತಮಠ ಅವರು ತಮ್ಮ ಪುತ್ರನನ್ನೇ ಶ್ರೀ ಖಾಸ್ಗತೇಶ್ವರ ಮಠಕ್ಕೆ ತಮ್ಮ ಏಕೈಕ ಪುತ್ರನನ್ನು ಪೀಠಾಧಿಕಾರಿಯನ್ನಾಗಿ ನೇಮಿಸಿದನ್ನು ಬಣ್ಣಿಸಿದ ಅವರು ಈ ಹಿಂದಿನ ಪೀಠಾಧಿಪತಿಗಳಾಗಿದ್ದ ಲಿಂ.ವಿರಕ್ತ ಮಹಾಸ್ವಾಮಿಗಳ ಅಪೇಕ್ಷೆಯನ್ನು ಇಡೇರಿಸಿದ್ದಾರೆಂದರು. ಶ್ರೀ ಖಾಸ್ಗತೇಶ್ವರ ಮಠದ ಎಲ್ಲ ಜವಾಬ್ದಾರಿಯನ್ನು ವೇ. ಮುರುಘೇಶ ಅವರು ನಡೆಸಿಕೊಂಡು ಸಾಗಿದ್ದರ ಕುರಿತು ಬಾಲ ಶಿವಯೋಗಿ ಶ್ರೀ ಸಿದ್ದಲಿಂಗ ದೇವರಿಗೆ ಶಿಕ್ಷಣಕ್ಕೆ ಅನುವು ಮಾಡಿಕೊಟ್ಟಿದ್ದರ ಕುರಿತು ಶ್ರೀಗಳು ಬಣ್ಣಿಸಿದರಲ್ಲದೇ ಶ್ರೀ ಸಿದ್ದಲಿಂಗ ದೇವರು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಆಯಾ ಕಾರ್ಯಕ್ರಮಕ್ಕೆ ತಕ್ಕಂತೆ ತಮ್ಮ ಆಶೀರ್ವಚನದಲ್ಲಿ ನುಡಿಯುತ್ತಿರುವದನ್ನು ನಾನು ಆಲಿಸಿದ್ದೇನೆ ಅವರಿಗೆ ಶ್ರೀ ಖಾಸ್ಗತೇಶ್ವರರ ಆಶೀರ್ವಾದ ಅವರ ಮೇಲಿದೆ ಅವರು ಸಾಮಾನ್ಯ ವ್ಯಕ್ತಿಯಾಗುವದಿಲ್ಲಾ ಅವರೊಬ್ಬ ಯೋ-ಗಿಯೇ ಆಗುತ್ತಾರೆಂದರು.

ಅಫಜಲಪೂರ ಹಿರೇಮಠದ ಶ್ರೀ ವಿಶ್ವರಾಧ್ಯಮಳೇಂದ್ರ ಶಿವಾಚಾರ್ಯರು 19ನೇ ಪೀಠಾಧಿಪತಿಗಳಾಗಿದ್ದು ಸುಮಾರು 120ಕ್ಕೂ ಹೆಚ್ಚು ಗ್ರಾಮಗಳು ಶ್ರೀಗಳ ಮಠಕ್ಕೆ ಒಳಗೊಂಡಿವೆ ಸುಮಾರು 50ಸಾವಿರಕ್ಕೂ ಮಿಕ್ಕಿ ಭಕ್ತರನ್ನು ಹೊಂದಿದ್ದಾರಲ್ಲದೇ ಶ್ರೀಮಠವೂ ಕೂಡಾ, ಉಜ್ಜಯಿನಿ ಶಾಖಾ ಮಠವೂ ಕೂಡಾ ಇದಾಗಿದೆ ಎಂದು ವೇ. ಮುರುಘೇಶ ವಿರಕ್ತಮಠ ಅವರು ತಮಗೆ ತಿಳಿದಿರುವಷ್ಟು ಅಫಜಲಪೂರ ಶ್ರೀಮಠದ ನಡೆದುಬಂದ ಕಾರ್ಯ ವೈಖರ್ಯಗಳ ಕುರಿತು ಸಹ ಘಂಟೆ ಕಾಲ ಚರ್ಚಿಸಿದರು.

ಇದೇ ಸಮಯದಲ್ಲಿ ಶ್ರೀಮಠಕ್ಕೆ ಆಗಮಿಸಿದ ವೇ.ಮುರುಘೇಶ ವಿರಕ್ತಮಠ ಅವರನ್ನು ಹಾಗೂ ಭಕ್ತರಾದ ಹಣಮೇಶ ಜೈನಾಪೂರ, ಸಿದ್ದನಗೌಡ ಓತಿಹಾಳ, ಶಶಿಕುಮಾರ ಸಜ್ಜನ ಅವರನ್ನು ಸನ್ಮಾನಿಸಿ ಗೌರವಿಸಿದರು.

# ವಾಲ್ಮೀಕಿ ಮಹರ್ಷಿ ಈ ದೇಶದ ಶ್ರೇಷ್ಠ ಆದಿಕವಿ: ಶಿವಾನಂದ ಲಾಳಸಂಗಿ



**ವಿಜಯಪುರ:** ವಾಲ್ಮೀಕಿ ಮಹರ್ಷಿ ಈ ದೇಶದ ಶ್ರೇಷ್ಠ ಆದಿಕವಿ. ಅವರು ಕವಿಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ ಎಂದು ಯುವ ಮುಖಂಡ ಶಿವಾನಂದ ಲಾಳಸಂಗಿ ಬಣ್ಣಿಸಿದರು.

ನಗರದ ಶ್ರೀ ಸ್ವಾಮಿ ವಿವೇಕಾನಂದ ಸೇವಾ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಾಲ್ಮೀಕಿ ಮಹರ್ಷಿಗಳು ಋಷಿಯಾಗುವ ಮೊದಲು ರತ್ನಾಕರ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದರು. ನಂತರ ನಾರದರಿಂದ ಪ್ರೇರಿತರಾಗಿ ತಪಸ್ಸು ಗೈದು ವಾಲ್ಮೀಕಿಯಾದರು ಎಂದರು. ಈ ದೇಶ ಕಂಡ ಮಹಾನ ದಾರ್ಶನಿಕರಲ್ಲಿ ಒಬ್ಬರಾದ ಮಹರ್ಷಿ ವಾಲ್ಮೀಕಿ ಅವರ ಜೀವನ ಸಂದೇಶಗಳನ್ನು ಇಂದಿನ ಯುವ ಜನಾಂಗಕ್ಕೆ ಹಾಗೂವಿದ್ಯಾರ್ಥಿಸಮುದಾಯಕ್ಕೆ ಸಂದೇಶಗಳನ್ನು ಮುಟ್ಟಿಸುವ ಕೆಲಸ ಆಗಬೇಕಾದ ಅಗತ್ಯವಿದೆ ಎಂದರು.

ಈ ಸಂದರ್ಭದಲ್ಲಿ ಮುದಕಣ್ಣ ಅವಟಿ, ಶಿವಶರಣ ಲಾಳಸಂಗಿ, ಸುನೀಲ ಮೋದಿ, ಅನಿಲ ಒಂಟಿ, ಶರಣು ಮಾಗಾವಿ,

ಸಿದ್ರಾಮ ಉಪ್ಪಿನ, ನಿಲೇಶ ಹಿರೊಳ್ಳಿ,ಶಶಿಧರ ಮಳ್ಳಿ, ವಿಶ್ವನಾಥ ರೇವೂರ, ವಿಠಲ ವಾಲಿಕಾರ, ಸುರೇಶ ಬಿರಾದಾರ, ಶಿವಾನಂದ ತುಪ್ಪದ, ವಿಕ್ರಮ ಸುತ್ತಾರ, ಮುಖೇಶ ಚೌಧರಿ, ಸುನೀಲ ಚವ್ಹಾಣ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಡಾ. ಕಲಾಂ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ



**ಅಥಣಿ :** ಕ್ಷಿಪಣಿ ಜನಕ. ಮಾಜಿ ರಾಷ್ಟ್ರಪತಿ. ಭಾರತ ರತ್ನ ಡಾ. ಎಪಿಜೆ ಅಬ್ದುಲ್ ಕಲಾಂ ಅವರ 93ನೇ ಜನ್ಮ ದಿನಾಚರಣೆಯನ್ನು ಪಟ್ಟಣದ ಹಲ್ಯಾಳ ರಸ್ತೆಗೆ ಹೊಂದಿಕೊಂಡಿರುವ ಅಬ್ದುಲ್ ಕಲಾಂ ವೃತ್ತದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡು ಮೂಲಕ ಸರಳ ರೀತಿಯಲ್ಲಿ ಜಯಂತ್ಯುತ್ಸವವನ್ನು ಆಚರಣೆ ಮಾಡಲಾಯಿತು.

ಈ ವೇಳೆ ಮುಫ್ತಿ ಹಬೀಬುಲ್ಲಾ ಕಾಶ್ಮೀ ಮಾತನಾಡಿ ಎಪಿಜೆ ಅಬ್ದುಲ್ ಕಲಾಂ ಅವರು ಭಾರತ್ ದೇಶಕ್ಕೆ ಅಷ್ಟೆ ಅಲ್ಲ ಇಡೀ ಜಗತ್ತಿಗೆ ಮಾದರಿಯಾದವರು ಅವರಿಗೆ ಹೊರ ರಾಷ್ಟ್ರಗಳಿಂದ ಕೂಡ ಅಹ್ವಾನ ಬಂದಿತ್ತು. ನಿಮಗೆ ಉನ್ನತ ಹುದ್ದೆಯನ್ನು ನೀಡುತ್ತೇವೆ ನಮ್ಮ ದೇಶದಲ್ಲಿ ಬನ್ನಿ ಎಂದು ಆದರೂ ಕೂಡ ಅಬ್ದುಲ್ ಕಲಾಂ ಅವರು ಯಾವುದೇ ಅಪೇಕ್ಷೆಗಳಿಗೆ ಒಳಗಾಗದೆ. ಭಾರತ ದೇಶದಲ್ಲೇ ಇದ್ದು ತಮ್ಮ ಇಡಿ ಜೀವನವನ್ನು ದೇಶದ ಏಳಿಗೆಗೆ ಮುಡಿಪಾಗಿಇಟ್ಟವರು ಇಂತಹ ಮಹಾನ್ ವ್ಯಕ್ತಿಯ ಜಯಂತಿಯನ್ನು ಮುಂಬರುವ ದಿನಗಳಲ್ಲಿ ವಿಶೇಷ ರೀತಿಯಲ್ಲಿ ಆಚರಣೆ ಮಾಡಬೇಕಿದೆ ಎಂದರು.

ನಂತರ ಮೌಲಾನಾ ಕಲಿಮುಲ್ಲಾ ಮಾತನಾಡಿ ಡಾ. ಅಬ್ದುಲ್ ಕಲಾಂ ಅವರು ಬಡತನದಲ್ಲಿ ಜೀವನ ನಡೆಸುತ್ತಾ ಬಂದು ತಮ್ಮ ಕೌಶಲ್ಯವನ್ನು ಇಡಿ ದೇಶಕ್ಕೆ ತೋರಿಸಿದರು. ಕಲಾಮ್ ಅವರು ತಮ್ಮ ಜೀವನದಲ್ಲಿ ನಾನು ಏನು ಗಳಿಸಬೇಕು ಎಂಬುದನ್ನು. ಎಂದು ಕೂಡ್ ಯೋಚನೆ ಮಾಡಿರಲಿಲ್ಲ ಅವರ ವಿಚಾರ ಒಂದೇ ಆಗಿತ್ತು ನಾನು ದೇಶಕ್ಕಾಗಿ ಏನು ಮಾಡಬೇಕು ಎಂಬುದು ಕೊನೆಗೆ ಅವರು ಈ ದೇಶವನ್ನ ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬಿ ಮಾಡುವಲ್ಲಿ ಯಶಸ್ವಿಯಾದರು ಅವರ ಆದರ್ಶಗಳನ್ನು ಇಂದಿನ ಯುವ ಪೀಳಿಗೆ ತಮ್ಮ ಜೀವನದಲ್ಲಿ ಅಳವಡಿಸಬೇಕಿದೆ ಎಂದರು.

ನಂತರ ಪಾರ್ಥನಹಳ್ಳಿ ಸರ್ಕಾರಿ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಎಸ್ ಎಂ ರಾಠೋಡ ಮಾತನಾಡಿ ಎಪಿಜೆ ಕಲಾಂ ಅವರು ಯಾವುದೇ ಒಂದು ಜಾತಿಗೆ ಸೀಮಿತವಾದವರಲ್ಲ ಅವರು ಜಾತ್ಯಾತೀತ ಹಾಗೂ ಪಕ್ಷಾತೀತ ನಾಯಕರಾಗಿದ್ದರು.

ದೇಶದಲ್ಲಿ ಆಗಿ ಹೋಗಿರುವ ಎಲ್ಲ ರಾಷ್ಟ್ರ ಪತಿಗಳಲ್ಲಿ ಡಾ. ಅಬ್ದುಲ್ ಕಲಾಂ ಅವರು ಮುಂಚೂಣಿಯಲ್ಲಿದೆ.

ಅವರ ನಮ್ಮ ದೇಶಕ್ಕೆ ನೀಡಿದ ಮಹಾನ್ ಕೊಡುಗೆಗಳನ್ನ ನಾವು ಸ್ಮರಣೆ ಮಾಡಿಕೊಳ್ಳಬೇಕು ರಕ್ಷಣಾ ಕ್ಷೇತ್ರದಲ್ಲಿ ಭಾರತ ಇಂದು ಮುಂಚೂಣಿಯಲ್ಲಿದೆ ಎಂದರೆ ಅದು ಕಲಾಂ ಅವರ ಕೊಡುಗೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ ಎಂದ ಅವರು ತನ್ನ ದೇಶವನ್ನ ಬಿಟ್ಟು ಎಲ್ಲಿ ಹೋಗದೆ ನಾನು ಭಾರತ ಮಾತೆಯ ಮಡಿಲಲ್ಲೇ ಇದ್ದು ಭಾರತ ದೇಶವನ್ನ ಇಡೀ ಜಗತ್ತಿಗೆ ಮಾದರಿಯಾಗಿ ತೋರಿಸುತ್ತೇನೆ ಎಂದು ಹೇಳಿದ್ದರು.

ಈ ಸಂದರ್ಭದಲ್ಲಿ ಧರ್ಮ ಗುರುಗಳಾದ ಮೌಲಾನಾ ಜುಬೇರ್, ಮೌಲಾನಾ ಇಮ್ತಿಯಾಜ್, ಮೌಲಾನಾ ಸೊಹೇಲ್, ಮೌಲಾನಾ ಜಾವೀದ್, ಸೈಯದಅಮೀನ ಗದ್ಯಾಳ, ಅಸ್ಲಮ್ ನಾಲಬಂದ ,ಮುಸ್ತಾಕ ಮುಲ್ಲಾ. ಜುಬೇರ್ ನಾಲಬಂದ, ಆಬೀದ್ ಮಾಸ್ಟರ್, ರಿಯಾಜ್ ಸನದಿ, ಸೈಯದ್ ಗಡ್ಡೇಕರ್, ಇಮ್ರಾನ್ ಪಟಾಯಿತ್, , ಸಾಜೀದ್ ಮತ್ತೆ , ಯಾಸೀನ್ ಸಾತಬಚ್ಚೆ , ಆಸೀಫ್ ತಾಂಬೋಳಿ, ಶಮಶುದ್ದೀನ ಕಿರಣಗಿ ಮೊಹಮ್ಮದ್ ಕ-ರೋಶಿ, ಆರೀಫ್ ನಾಲಬಂದ, ನ್ಯಾಯವಾದಿ ಎಂ ಯು ಸನದಿ, ದಸ್ತಗೀರ ಜಮಾದಾರ. ಮುಸ್ತಾಕ್ ಪಟೇಲ್. ಇರ್ಷಾದ್ ಸನದಿ. ಸೇರಿದಂತೆ ಹಲವರು ಉಪಸ್ಥಿತರಿದ್ದರು. ಅಥಣಿ ತಾಲೂಕಾ ಮೈನಾರಿಟಿ ಆಂಡ್ ಸೋಷಿಯಲ್ ವೇಲ್ ಫೇರ್ ಕಮೀಟಿ ಅಧ್ಯಕ್ಷ ಅಯ್ಯಾಜ ಮಾಸ್ಟರ್ ಸ್ವಾಗತಿಸಿದರು ಶಿಕ್ಷಕ ಅಜಹರ ಮುಲ್ಲಾ ನಿರೂಪಿಸಿ ವಂದಿಸಿದರು.

## ವಿಶ್ವಮಾನಸಿಕ ಆರೋಗ್ಯ ದಿನಾಚರಣೆ-2024

# ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುವ ಸಮಯ: ಡಾ.ಗೀತಾ ಕಾಂಬಳೆ



**ಬೆಳಗಾವಿ :** ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುವುದು ಬಹುಮುಖ್ಯವಾಗಿದೆ. ಕೆಲಸದ ಸ್ಥಳದಲ್ಲಿ ಮಾನಸಿಕ ಸಮಸ್ಯೆಯೂತ ವ್ಯಕ್ತಿಗಳು ಇದ್ದಲ್ಲಿ ಕೆಲಸವನ್ನು ಬದಲಾವಣೆ ಮಾಡಿ, ಅವರಿಗೆ ಆರೋಗ್ಯಕರ ವಾತಾವರಣ ನಿರ್ಮಿಸುವುದು ನಮ್ಮ ಎಲ್ಲರ ಕರ್ತವ್ಯ ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿಗಳಾದ ಡಾ.ಗೀತಾ ಕಾಂಬಳೆ ಅವರು ಹೇಳಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ, ನಗರ ಕೇಂದ್ರ ಗ್ರಂಥಾಲಯ ಹಾಗೂ ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್‌ಡಿಸೆಬಿಲಿಟಿ (ಎ.ಪಿ.ಡಿ) ಇವರ ಸಹಯೋಗದಲ್ಲಿ ಬುಧವಾರ (ಅ.16) ನಗರ ಕೇಂದ್ರ ಗ್ರಂಥಾಲಯ ನಡೆದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ-2024ರ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದ್ದರು.

ಎ.ಪಿ.ಡಿ ಸಂಸ್ಥೆಯ ಜಿಲ್ಲಾ ಸಂಯೋಜ-ಕರು ಕಾವೇರಿ ಅವರು ಮಾತನಾಡಿ, ಮಾನಸಿಕ ಕಾಯಿಲೆಯಿಂದ ದೂರ ಇರಲು ಸಕಾರಾತ್ಮಕ ಚಿಂತನೆಗಳೊಂದಿಗೆ ನಮ್ಮ ಕೆಲಸದ ಸ್ಥಳದಲ್ಲಿ ಬೇಜಾರು, ಒತ್ತಡಕ್ಕೆ ಒಳಗಾದ ಸಮಯದಲ್ಲಿ 5 ನಿಮಿಷಗಳ ಕಾಲ ನಮ್ಮ ನಕಾರಾತ್ಮಕ ಭಾವನೆಗಳನ್ನು ಒಂದು ಪತ್ರದಲ್ಲಿ ಬರೆದು ಅದನ್ನು ಕಸದ ತೊಟ್ಟಿಗೆ ಬೀಸಾಕಿ ಮುಂದೆ ಸಾಗುವಂತೆ ತಿಳಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮನೋವೈದ್ಯಕೀಯ ಸಮಾಜ ಕಾರ್ಯಕರ್ತರಾದ ಸವಿತಾ ತಿಗಡಿ ಅವರು ಮಾತನಾಡಿ, ಖಿಜಟಜ-ಟಚಿಟಿಭಿಚಿ ಖಿಂಟಟ ಈಡಿಜಜ ಓಣಟ-ಛಿಜಡಿ-14416 ಬಗ್ಗೆ ಮತ್ತು ತಾಲೂಕಾ ಮಟ್ಟದ ಮನೋ ಚೈತನ್ಯ ಕ್ಲಿನಿಕ್ ಬಗ್ಗೆ ಮಾತನಾಡಿದರು.

ನಗರ ಕೇಂದ್ರ ಗ್ರಂಥಾಲಯದ ಹಿರಿಯ ಗ್ರಂಥಪಾಲಕರಾದ ಶಶಿಕಲಾ ಸೀಮಿಮಠ ಅವರು ಅಧ್ಯಕ್ಷತೆಯ ಭಾಷಣ ಮಾಡಿದರು. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮನೋವೈದ್ಯರಾದ ಡಾ.ಅಬ್ರಾರ ಪುಣೇಕರ ಅವರು ಕಾರ್ಯಕ್ರಮದಲ್ಲಿ ಮಾನಸಿಕ ಕಾಯಿಲೆಯ ಲಕ್ಷಣಗಳು, ಕಾರಣಗಳು, ಚಿಕಿತ್ಸೆ ಮತ್ತು ಆಪ್ತ ಸಮಾಲೋಚನೆ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ನಗರ ಕೇಂದ್ರ ಗ್ರಂಥಾಲಯದ ಸಹಾಯಕ ಗ್ರಂಥಪಾಲಕರು ಪ್ರಕಾಶ ಇಂಚಲಕರಂಜಿ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಪೂಜಾ ನಾಯಿಕ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಶಿವಾಜಿ ಮಾಳ್ಗೆನ್ನವರ, ನಗರ ಕೇಂದ್ರ ಗ್ರಂಥಾಲಯದ ಎಲ್ಲ ಸಿಬ್ಬಂದಿಗಳು, ಗ್ರಂಥಾಲಯಕ್ಕೆ ಆಗಮಿಸಿದ ಎಲ್ಲ ಫಲಾನುಭವಿಗಳು ಹಾಗೂ ಡಿ.ಇ.ಡಿ ಕಾಲೇಜ ವಿದ್ಯಾರ್ಥಿಗಳು ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಉಪಸ್ಥಿತರಿದರು.

# 20 ವರ್ಷದ ಕನಸು ನನಸು: ಸಚಿವ ಆರ್.ಬಿ. ತಿಮ್ಮಾಪುರ





**ಮುಧೋಳ :** ಮುಖ್ಯವಾದ ಬೈಪಾಸ್ ರಸ್ತೆಯ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ ಸಚಿವ. 20 ವರ್ಷದ ಕನಸು ನನಸಾಗಿದೆ ಇಂದು ಭೂಮಿ ಪೂಜೆ ಮಾಡಿದ್ದಕ್ಕೆ ತುಂಬಾ ಸಂತೋಷವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಮುಧೋಳ ನಗರದ ಕುಂಬಾರಗಲ್ಲಿ ಹಿಂದುಗಡೆ ಮಾರ್ಗವಾಗಿ ಮಾಲಿಂಗಪುರ ರಸ್ತೆಗೆ ಕೂಡುವ ಹೊಸ ಬೈಪಾಸ್ ರಸ್ತೆ ಕಾಮಗಾರಿಯ ಅಂದಾಜು ವೆಚ್ಚ 1195 ಲಕ್ಷ ಕಾಮಗಾರಿಯ ಭೂಮಿ ಪೂಜಾ ಕಾರ್ಯಕ್ರಮವನ್ನು ಸಚಿವ ಆರ್ ಬಿ ತಿಮ್ಮಾಪುರವರು ನೆರವೇರಿಸಿ ಮಾತನಾಡಿದರು.

ನಾನು ಎಪಿಎಂಸಿ ಮಿನಿಸ್ಟರ್ ಆದ-ಾಗ ಈ ಬೈಪಾಸ್ ರಸ್ತೆಯನ್ನು ನಿರ್ಮಾಣ ಮಾಡಬೇಕು ಎಂದು ವಿಚಾರ ಮಾಡಿದ್ದೆ ಆದರೆ ಕಾಲಾವಕಾಶ ಕೂಡಿ ಬಂದಿರಲಿಲ್ಲ 20 ವರ್ಷ ವರೆಗಿನ ಈ ರಾಜಕೀಯದಲ್ಲಿ ಏರಿಳಿತ ಆದವು ಇವಾಗ ಮತ್ತೆ ನಿಮ್ಮೆಲ್ಲರ ಆಶೀರ್ವಾದದಿಂದಶಾಸಕಸಚಿವನಾಗಿದ್ದೇನೆ ಮುಖ್ಯವಾದ ಅವಶ್ಯಕತೆ ಇರುವ ಬೈಪಾಸ್ ರಸ್ತೆಯ ಕಾಮಗಾರಿ ಭೂಮಿ ಪೂಜೆ ಮಾಡಿದ್ದರಿಂದ ಬಹಳ ಸಂತೋಷವಾಗಿದೆ. ಈ ಬೈಪಾಸ್ ರಸ್ತೆಗೆ ಭೂಮಿ ನೀಡಿರುವಂತಹ ರೈತರಿಗೆ ವಿಶೇಷವಾದ ಧನ್ಯವಾದಗಳು ಎಂದು ಹೇಳಿದರು. ಈ ಬೈಪಾಸ್ ರಸ್ತೆ ನಿರ್ಮಾಣವಾದರೆ ಟ್ರಾಫಿಕ್ ಕಿರಿಕಿರಿ ತಪ್ಪಿಸಬಹುದು ಶುಗರ್ ಫ್ಯಾಕ್ಟರಿ ಪ್ರಾರಂಭವಾದರೆ ಕಬ್ಬಿನ ಟ್ಯಾಕ್ಟರ್ ಗಳು ಹೋಗಲು ಬರಲು ಅನುಕೂಲವಾಗಲಿದೆ. ಒಂದೇ ವರ್ಷದಲ್ಲಿ 4.5. ಅಪಘಾತ ಸಂಬವಿಸಿ ಪ್ರಾಣ ಹಾನಿ ಆಗುತ್ತಿದ್ದವು. ಜನದಟ್ಟನೆ ಕಡಿಮೆ ಮಾಡಲು ಈ ರಸ್ತೆ ಬಹಳ ಅನುಕೂಲವಾಗಲಿದೆ 20 ವರ್ಷಗಳ ಹಿಂದಿನ ಕನಸು ನನಸಾಗಲಿದೆ. ಮುಧೋಳ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಮಾಡುವುದು ನನ್ನ ಆದ್ಯ ಕರ್ತವ್ಯವಾಗಿದೆ. ಶೀಘ್ರದಲ್ಲಿ 15 ಕೋಟಿ ವೆಚ್ಚದ ತಾಯಿ ಮಕ್ಕಳ ಸುಸಜ್ಜಿತ ಆಸ್ಪತ್ರೆಯ ಭೂಮಿ ಪೂಜ ಕಾರ್ಯಕ್ರಮವನ್ನು ನಡೆಸಲಾಗುವುದು ಇವಾಗ ಟೆಂಡರ್ ಪ್ರಕ್ರಿಯೇ ಶುರುವಾಗಿದೆ ಮತ್ತು ಯಾದವಾಡ ರಸ್ತೆಗೆ ಮತ್ತು ಮಾಲಿಂಗಪುರ ರಸ್ತೆಗೆ ಲಿಂಕ್ ರಸ್ತೆ ಕೂಡುವ ಜಾಲಿಭೇರಿ ಮಾರ್ಗವಾಗಿ ರಸ್ತೆ ಕಾಮಗಾ-ರಿಯನ್ನು ಕೈಯೆತ್ತಿಕೊಳ್ಳಲಾಗುವುದು ಇವಾಗ ಜಾಲಿಬೆರಿಗೆ ಅಡ್ಡಲಾಗಿ ಬ್ರಿಜ್ ಕಮ್ ಬ್ಯಾರೇಜ್ ಕಾಮಗಾರಿ ಭೂಮಿ ಪೂಜೆ ಮಾಡಲಾಗಿದೆ ಈ ಬೇಸಿಗೆಯಲ್ಲಿ ಕಾಮಗಾ-ರಿಯನ್ನು ಮಾಡಲಾಗುವುದು.

ನಗರದ ಕಾಂಗ್ರೆಸ್ ಹಿರಿಯರಾದ ಉದಯ ಸಿಂಹ ಪಡತರೆ ಮಾತನಾಡಿ ಇದೊಂದು ಸಾರ್ವಜನಿಕರಿಗೆಮುಖ್ಯವಾಗಿಬೇಕಾಗಿರುವ ಅವಶ್ಯವಿರುವ ಬೈಪಾಸ್ ರಸ್ತೆ ಕೇವಲ 12 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ರಸ್ತೆ ಚೀಪ್ ಅಂಡ್ ಬೆಸ್ಟ್ ರಸ್ತೆ ಸರ್ಕಾರದಲ್ಲಿ ವಿನಾಕಾರಣ ಬಹಳಷ್ಟು ದುಡ್ಡು ತಂದು ಮಾಡುವುದು ಸರಿಯಾದ ಕ್ರಮವಲ್ಲ ಅವಶ್ಯ ಇರುವ ಬೈಪಾಸ್ ರಸ್ತೆ ಕಾಮಗಾರಿ ಭೂಮಿ ಪೂಜ ನೆರವೇ-ರಿಸಿದ ಸಚಿವರಿಗೆ ನಗರದ ರೈತರ ವಾಹನ ಸವಾರರ ರೈತರ ಸಾರ್ವಜನಿಕರ ಪರವಾಗಿ ಅಭಿನಂದನೆಗಳನ್ನು ಹೇಳಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಮಾದೇವ ಸಣ್ಣಮುರಿ.

ಇಒ ಸಿದ್ನಾಳ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಶೋಕ ಕಿವಡಿ. ನಗರ ಘಟಕ ಅಧ್ಯಕ್ಷ ರಾಘು ಮೋಕಾಶಿ. ಹಿರಿಯರಾದ ಬಸವಂತ ಕಾಟೇ.ರಾಜು ಬಾಗವಾನ. ಸಿದ್ದು ಸೂರ್ಯವಂಶಿ.ವೆಂಕಣ್ಣ ಗಿಡ್ಡಪ್ಪಣ್ಣವರ. ಅಶೋಕ ಕುಳಲಿ.ಸಧುಗೌಡ ಪಾಟೀಲ.ಶೇಖರ್ ಗಡ್ಡಿ.ಗೋವಿಂದಪ್ಪ ಗುಜ್ಜಣ್ಣವರ. ಇನ್ನು ಮುಂತಾದವರು ಉಪಸ್ಥಿತರಿದ್ದರು.

# ಅನುವಾದ ಎಂಬ ಕೆಲಸಕ್ಕೆ ಸಾಮಾಜಿಕ ಹಿನ್ನೆಲೆ ಇದೆ




**ಧಾರವಾಡ :** ಅನುವಾದ ಎಂಬ ಕೆಲಸಕ್ಕೆ ಒಂದು ಸಾಮಾಜಿಕ ಹಿನ್ನೆಲೆ ಇದೆ. ಎಲ್ಲರೂ ಸೇರುವುದಕ್ಕೆ ಸಾಮಾಜಿಕತೆ ಎನ್ನುತ್ತೇವೆ. ಇದು ಕುಲ ನಿರ್ಮಾನವೂಆಗಿರುತ್ತದೆ ಎಂದು ತುಮಕೂರು ವಿಶ್ವವಿದ್ಯಾಲಯದ ಇಂಗ್ಲೀಷ ಪ್ರಾಧ್ಯಾಪಕ ಡಾ. ಎನ್. ಎಸ್. ಗುಂಡೂರ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಎಮೆರಿಟಸ್ ಪ್ರೊಫೆಸರ್ ಸಿ.ಆರ್.ಯರವಿನತೆಲಿಮಠದತ್ತಿ ಅಂಗವಾಗಿ ಆಯೋಜಿಸಿದ್ದ 'ಶೂನ್ಯ ಸಂಪಾದನೆಯಅನುವಾದ : ಸಾಮಾಜಿಕಇತಿಹಾಸದ ಒಳನೋಟಗಳು' ವಿಷಯದಕುರಿತು ಮಾತನಾಡುತ್ತಿದ್ದರು.

ಮುಂದುವರಿದು ಮಾತನಾಡುತ್ತಾಏಕೀಕರಣಎನ್ನುವುದು ಬರೀಯರಾಜಕೀಂಯಯೋಜನೆಯಾಗಿದ್ದಿಲ್ಲ. ಅದೊಂದು ಸಂಸ್ಕೃತಿಕಯೋಜನೆಯೂಕೂಡಾಆಗಿತ್ತು.ಕನ್ನಡವನ್ನುಕಟ್ಟಬೇಕಾದರೆಕನ್ನಡ ಸಂಸ್ಕೃತಿಯನ್ನುಕಟ್ಟಬೇಕು.ಹಾಗಾಗಿ ಆಧುನಿಕಕನ್ನಡ ಸಾಹಿತ್ಯಕರ್ನಾಟಕ ನಿರ್ಮಾಣದಲ್ಲಿ ಭಾಗಿಯಾಗಿತ್ತು. ಅದಕ್ಕಾಗಿಕರ್ನಾಟಕರಾಜ್ಯಅನ್ನೋದು ಬರೀರಾಜಕೀಯಯೋಜನೆಯಲ್ಲ, ಸಾಹಿತ್ಯಿಕಯೋಜನೆಯೂಕೂಡಾಆಗಿರುತ್ತದೆ. ಸಾಹಿತ್ಯ ಬೇರೆಯಲ್ಲ, ರಾಜಕೀಯ ಬೇರೆಯಲ್ಲ. ರಾಜಕೀಯ ಸ್ವರೂಪಕವಿರಾಜ ಮಾರ್ಗದಲ್ಲಿ ಬೇರೆಇದೆ. ಶೂನ್ಯ ಸಂಪಾದನೆ ಕಾಲಕ್ಕೆ ಬೇರೆಇದೆ.ಆಧುನಿಕಕಾಲದಲ್ಲಿಅದು ಬೇರೆಯ ಸ್ವರೂಪವನ್ನು ಪಡೆದುಕೊಂಡಿದೆ. ಕರ್ನಾಟಕರಾಜ್ಯ ನಿರ್ಮಾಣಕ್ಕೆಕರ್ನಾಟಕ ವಿದ್ಯಾವರ್ಧಕ ಸಂಘ ಕಾರಣವಾದಂತೆ ಸಾಹಿತ್ಯ ಮತ್ತುರಾಜಕೀಯ ಒಳಸುಳಿವು ಒಂದೇಆಗಿರುತ್ತದೆಎಂಬುದುಇದರಿಂದಗೊತ್ತಾಗುತ್ತದೆ.

ಮೈಸೂರು ಭಾಗದಲ್ಲಿರಾಜಾಶ್ರಯಇತ್ತು. ಆದರೆಉತ್ತರ ಭಾಗದಲ್ಲಿಅಂಥಆಶ್ರಯಇಲ್ಲದ್ದರಿಂದಎಲ್ಲವನ್ನೂ ಹೋರಾಟ ಮಾಡಿಯೇ ಪಡೆದುಕೊಳ್ಳಬೇಕಾಯಿತು. ಮೈಸೂರಿಗೆ ಹೋದರೆಎಲ್ಲ ಸಂಸ್ಥೆಗಳೂ ಮಹಾರಾಜರ ಹೆಸರುಗಳಲ್ಲಿ ಇದ್ದರೆ, ಇಲ್ಲಿ ಸಮಷ್ಟಿ ಪ್ರಜ್ಞೆಯೊಂದಿಗೆಕರ್ನಾಟಕ ಹೆಸರನ್ನು ಹೊಟೆಲ್‌ದಿಂದ ಹಿಡಿದು–ಕೊಂಡು ವಿಶ್ವವಿದ್ಯಾಲಯದವರೆಗೆ ಇಟ್ಟುಕೊಳ್ಳಲಾಗಿದೆ.

ಹೊಸರಾಜ್ಯನಿರ್ಮಾಣಮಾಡಬೇಕೆಂದಾಗ ನಮಗೆ ಇತಿಹಾಸ ಬಹಳ ಮುಖ್ಯವಾಗುತ್ತದೆ. ಕರ್ನಾಟಕಗತವೈಭವದ ಭಾಗವಾಗಿ ಸಾಹಿತ್ಯ ಚರಿತ್ರೆಗಳಜೊತೆಗೆನಮ್ಮಚರಿತ್ರೆಗಳುಬಂದವು. ಹನ್ನೆರಡನೆ ಶತಮಾನ ಬಹು ಮುಖ್ಯ. ಕರ್ನಾಟಕಗತವೈಭವವನ್ನು ಮುದ್ರಣ ವ್ಯವಸ್ಥೆ ಮೂಲಕ ಕಟ್ಟಿಕೊಡುವ ಕೆಲಸ ಆಗ ಆಯಿತು. ಹದಿನೈದನೆಯ ಶತಮಾನದಲ್ಲಿ ಶೂನ್ಯ ಸಂಪಾದನೆಯಕಾಲಘಟ್ಟ ಪ್ರಮುಖವಾಗಿಗತವೈಭವವನ್ನು ಮರು ಅನುವಾದಿಸುವ ಕಾರ್ಯ ನಡೆಯಿತುಎಂದರು.

ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದ ಹಿರಿಯ ವೈದ್ಯಡಾ.ಎಸ್.ಆರ್. ರಾಮನಗೌಡರ, ಮನುಷ್ಯ ಶೂನ್ಯದಿಂದ ಬಂದು, ಶೂನ್ಯದಲ್ಲಿಐಕ್ಯನಾಗುತ್ತಾನೆ. ಅಲ್ಲಮಪ್ರಭುಅಪಾರಜ್ಞಾನದ ಮನುಷ್ಯ. ಜ್ಞಾನಿಗಳನ್ನು ಸಂದರ್ಶಿಸುತ್ತಾ ಹೋದರು ಒಬ್ಬಜ್ಞಾನೀಯಅಂತರಂಗಇನ್ನೊಬ್ಬಜ್ಞಾನಿಗೆಗೊತ್ತಾಗುತ್ತದೆ. ಅಲ್ಲಮಪ್ರಭು ಸ್ಪುರದ್ರೂಪಿಯಾಗಿದ್ದಷ್ಟೆಅಂತರಂಗಜ್ಞಾನದ ಪರಾಕಾಷ್ಠೆ ಹೊಂದಿದ್ದರುಎಂದರು.

ಶಿವಾನಂದಭಾವಿಕಟ್ಟಿಸ್ವಾಗತಿಸಿದರು,ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು ಶಂಕರ ಕುಂಬಿ ನಿರ್ವಹಿಸಿದರು ಶಶಿಧರ ತೋಡಕರ ವಂದಿಸಿದರು.

ಶ್ರೀಮತಿ ಅಕ್ಕಮ್ಮಗುಂಡೂರ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಬಸವಪ್ರಭು ಹೊಸಕೇರಿ, ಸತೀಶತುರಮರಿ, ಡಾ.ಧನವಂತ ಹಾಜವಗೋಳ,ಡಾ.ಡಿ.ಎಂ.ಹಿರೇಮಠ,ಪ್ರೊ. ಮಲ್ಲಿಕಾರ್ಜುನ ಪಾಟೀಲ, ನಿಂಗಣ್ಣಕುಂಟಿ, ಸಿ.ಯು.ಬೆಳ್ಳಕ್ಕಿ, ಡಾ.ಬಾಳಣ್ಣಾ ಶೀಗೀಹಳ್ಳಿ, ಬಾಬುರಾವಗಾಯಕವಾಡ, ಬಿ.ಡಿ. ಪಾಟೀಲ, ಬಸವರಾಜತಲ್ಲೂರ, ಸಿ.ಎಸ್. ಪಾಟೀಲ, ಚನ್ನಬಸವ ಮಾಳವಾಡ, ಚಂದ್ರಶೇಖರ ವಸ್ತ್ರದ, ನಾಗಪ್ಪ ಹುದ್ದಾರ, ಶ್ರೀಮತಿ ಯರವಿನತೆಲಿಮಠ ಮುಂತಾದವರುಇದ್ದರು.

# ಕಲಾಕೃತಿಗಳಿಗೆ ಸಚಿವರ ಮೆಚ್ಚುಗೆ



**ಧಾರವಾಡ :** ಶೈಕ್ಷಣಿಕ ಬಲವರ್ಧನೆ ವರ್ಷ 2024–25ನೆಯ ಶೈಕ್ಷಣಿಕ ವರ್ಷದ ಅಂಗವಾಗಿ 'ನಮ್ಮ ಶಾಲೆ ನಮ್ಮ ಜವಾಬ್ದಾರಿ' ಎಂಬ ಪ್ರಧಾನ ಆಶಯದ ಅಡಿಯಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳ ವಿಕಾಸಕ್ಕೆ ಸಂಬಂಧಿಸಿದಂತೆ 50 ಜನ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರು ರಚಿಸಿರುವ ನೂರಕ್ಕೂ ಹೆಚ್ಚು ಚಿತ್ರಕಲಾ ಕೃತಿಗಳ ಪ್ರದರ್ಶನವನ್ನು ಇಲ್ಲಿಯ ಶಿಕ್ಷಕಿಯರ ಸರ್ಕಾರಿ ತರಬೇತಿ ವಿದ್ಯಾಲಯ(ಟಿಸಿಡಬ್ಲ್ಯೂ)ದಲ್ಲಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಉದ್ಘಾಟಿಸಿದರು.

ಇತ್ತೀಚಿಗೆ ಧಾರವಾಡದ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ ನಗರದ ಸರಕಾರಿ ಆರ್ಟ ಗ್ಯಾಲರಿಯಲ್ಲಿ ಹಮ್ಮಿಕೊಂಡಿದ್ದ ಬೆಳಗಾವಿ ವಿಭಾಗ ಮಟ್ಟದ ಐದು ದಿನಗಳ ಚಿತ್ರಕಲಾ ಶಿಕ್ಷಕರ ವಿಶೇಷ ಶಿಬಿರದಲ್ಲಿ ಈ ಕಲಾಕೃತಿಗಳನ್ನು ರಚಿಸಲಾಗಿತ್ತು.

ವಿಜಯಪುರ, ಬಾಗಲಕೋಟೆ, ಬೆಳಗಾವಿ, ಉತ್ತರಕನ್ನಡ, ಧಾರವಾಡ, ಹಾವೇರಿ, ಗದಗ, ಚಿಕ್ಕೋಡಿ ಮತ್ತು ಶಿರಸಿ ಜಿಲ್ಲೆಗಳ ಆಯ್ದ 50 ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರು ಈ ಶಿಬಿರದಲ್ಲಿ ಪಾಲ್ಗೊಂಡು ತಮ್ಮದೇ ಆದ ವಿಭಿನ್ನ ಪರಿಕಲ್ಪನೆಗಳಲ್ಲಿ ರಚಿಸಿರುವ ಚಿತ್ರಕಲಾ ಕೃತಿಗಳನ್ನು ಅವಲೋಕನ ಮಾಡಿದ ಅವರು, ವಿದ್ಯಾರ್ಥಿಗಳಲ್ಲಿ ಗುಣಮಟ್ಟದ ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳ ಅಳವಡಿಕೆ ಇರಬೇಕೆನ್ನುವ ವಿಶಿಷ್ಟ ಪರಿಕಲ್ಪನೆಗಳು ಬಹುಪಾಲು ಚಿತ್ರಕಲಾ ಕೃತಿಗಳಲ್ಲಿ ಅಭಿವ್ಯಕ್ತಗೊಂಡಿರುವುದಕ್ಕೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ ಹೆಚ್ಚುವರಿ ಆಯು–ಕ್ತೆ ಜಯಶ್ರೀ ಶಿಂತ್ರಿ, ಜಂಟಿ ನಿರ್ದೇಶಕ ಈಶ್ವರ ನಾಯಕ, ಧಾರವಾಡ ಡಿಡಿಪಿಐ ಎಸ್. ಎಸ್. ಕೆಳದಿಮಠ, ಹಾವೇರಿ ಡಯಟ್ ಪ್ರಾಚಾರ್ಯ ಗಿರೀಶ ಪದಕಿ, ಆಯುಕ್ತರ ಕಚೇರಿಯ ಚಿತ್ರಕಲಾ ವಿಷಯ ಪರಿವೀಕ್ಷಕ ಪಿ.ಆರ್. ಬಾರಕೇರ, ಟಿ.ಸಿ.ಡಬ್ಲ್ಯೂ. ಪ್ರಾಚಾರ್ಯ ರವಿಕುಮಾರ ಬಾರಾಟಕ್ಕೆ, ಇಲಾಖಾ ಅಧಿಕಾರಿಗಳಾದ ಉಮೇಶ್ ಬೊಮ್ಮಕ್ಕನವರ, ಅಶೋಕಕುಮಾರ ಸಿಂದಗಿ, ಎಸ್. ಎಂ. ಹುಡೇದಮನಿ, ರೇಣುಕಾ ಅಮಲಝರಿ, ಸೇರಿದಂತೆ ಇತರರು ಇದ್ದರು.

# ಹೆಣ್ಣು ಮಗುವಿನ ಮೇಲೆ ತಾತ್ಸಾರ ಭಾವನೆ ಬೇಡ



**ಧಾರವಾಡ :** ಸಮಾಜದಲ್ಲಿ ಮೂಢನಂಬಿಕೆ ಮತ್ತು ಮೌಢ್ಯತೆಯ ತಪ್ಪು ಕಲ್ಪನೆಗಳಿಂದ ಹೆಣ್ಣು ಮಗುವಿನ ಮೇಲೆ ತಾತ್ಸಾರ ಮತ್ತು ತಿರಸ್ಕಾರದ ಭಾವನೆ ಬೇಡವೆಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪರಶುರಾಮ ಎಫ್. ದೊಡ್ಡಮನಿ ಅವರು ಹೇಳಿದರು.

ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯಡಿ ಜಿಲ್ಲೆಯಲ್ಲಿ ಕರ್ತವ್ಯ ನಿರತ ವೈದ್ಯಾಧಿಕಾರಿಗಳಿಗೆ ಪಿಸಿ ಮತ್ತು ಪಿ.ಎನ್.ಡಿ.ಟಿ ಕಾಯ್ದೆ 1994 ರ ಕುರಿತು ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳಿಗೆ ವಿಶೇಷ ಗೌರವವಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಹಾಗೂ ಹೆಣ್ಣು ಮಗುವಿನ ಹತ್ಯೆ ಪ್ರಕರಣಗಳು ಅತಿ ಹೆಚ್ಚು ಬೆಳಕಿಗೆ ಬರುತ್ತಿದ್ದು, ಇಂತಹ ಪ್ರಕರಣಗಳ ವಿರುದ್ಧ ಧ್ವನಿ ಎತ್ತಬೇಕು ಎಂದು ಅವರು ಹೇಳಿದರು.

ಮೂಢನಂಬಿಕೆ ಮತ್ತು ಮೌಢ್ಯತೆ, ತಪ್ಪು ಕಲ್ಪನೆಗಳಿಂದ ಹೆಣ್ಣು ಮಕ್ಕಳ ಭ್ರೂಣ ಹತ್ಯೆ ಹೆಚ್ಚಾಗುತ್ತಿದೆ. ಭ್ರೂಣ ಹತ್ಯೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದರಿಂದ ಭ್ರೂಣ ಹತ್ಯೆಗಳನ್ನು ತಡೆಯಬಹುದು ಎಂದು ಅವರು ಹೇಳಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶಶಿ ಪಾಟೀಲ ಅವರು ಮಾತನಾಡಿ, ಇಂದಿನ ಸಮಾಜದಲ್ಲಿ ಹೆಣ್ಣು ಮಕ್ಕಳ ಭ್ರೂಣ ಹತ್ಯೆ ಹೆಚ್ಚುತ್ತಿದೆ. ಭ್ರೂಣ ಹತ್ಯೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಭ್ರೂಣ ಹತ್ಯೆಯನ್ನು ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಬಿ.ಎಸ್. ಮುಗನೂರಮಠ ಅವರು ಕಾರ್ಯಕ್ರಮದಲ್ಲಿ ಮಾತನಾಡಿ, ಶಿಕ್ಷಣದಿಂದ ಬದಲಾವಣೆ ಕಾಣಬಹುದು. ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನಮ್ಮ ಮನೆಯಿಂದಲೇ ಪ್ರಾರಂಭಿಸಬೇಕು. ಭ್ರೂಣ ಹತ್ಯೆ ತಡೆಗಟ್ಟಲು ಸಮಾಜದಲ್ಲಿ ಉತ್ತಮ ಸಂದೇಶವನ್ನು ಬಿತ್ತರಿಸುವ ಕೆಲಸವಾಗಬೇಕು ಎಂದು ಹೇಳಿದರು.

ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞ ಡಾ.ಯೋಗೇಂದ್ರ ಕಬಾಡಿ ಅವರು ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಕೇಂದ್ರಗಳು ನಿರ್ವಹಿಸಬೇಕಾದ ದಾಖಲಾತಿಗಳು ಹಾಗೂ ವಿವರದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಅರವಳಿಕೆ ತಜ್ಞ ಹಾಗೂ ವೈದ್ಯಕೀಯ ಸಲಹೆಗಾರ ಡಾ. ಶಿವಕುಮಾರ ಕುಂಬಾರ ಅವರು ಪಿಸಿ ಮತ್ತು ಪಿ.ಎನ್.ಡಿ.ಟಿ ಕಾಯ್ದೆಯ ಕುರಿತು ಉಪನ್ಯಾಸ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಡಾ. ಎಚ್.ಎಚ್. ಕುಕನೂರು ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಸುಜಾತಾ ಮುರಾರಿ ಅವರು ಕಾರ್ಯಕ್ರಮ ನಿರೂಪಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ಡಾ. ಕಮಲಾ ಬೈಲೂರ ವಂದಿಸಿದರು. ಜಿಲ್ಲಾ ನೋಡಲ್ ಅಧಿಕಾರಿ ಡಾ. ಮಹೇಶ ಚಿತ್ತರಗಿ ಅವರು ವೇದಿಕೆಯಲ್ಲಿದ್ದರು.

ಪೊಲೀಸ್ ಇಲಾಖೆ ಅಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನೆಯ ಅಧಿಕಾರಿಗಳು, ಜಿಲ್ಲೆಯ ಖಾಸಗಿ ಮತ್ತು ಸರಕಾರಿ ವೈದ್ಯಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬ್ಬಂದಿಗಳು ಹಾಗೂ ಮೇಲ್ವಿಚಾರಕರು ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.

# ಅಂಜಲಿ ಕುಟುಂಬಕ್ಕೆ 5ಲಕ್ಷ ರೂ ಪರಿಹಾರ



**ಹುಬ್ಬಳ್ಳಿ :** ಯುವಕನಿಂದ ಕೊಲೆಯಾದ ಯುವತಿ ಅಂಜಲಿ ಅಂಬಿಗೇರ ಕುಟುಂಬಕ್ಕೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 5 ಲಕ್ಷ ರೂ. ಪರಿಹಾರ ಮಂಜೂರು ಮಾಡಿ ಆದೇಶಿಸಲಾಗಿದೆ.

ವೀರಾಪುರ ಓಣಿ ಕರಿಯಮ್ಮನ ಗುಡಿ ಬಳಿಯ ಮನೆಯಲ್ಲಿ ಮೇ 15ರಂದು ಅಂಜಲಿ ಕೊಲೆ ನಡೆದಿತ್ತುಅಂದು ಬೆಳಗಿನಜಾವ ಪರಿಚಿತನಾದ ಗಿರೀಶ ಸಾವಂತ ಎಂಬಾತ, ಅಂಜಲಿ ಅಂಬಿಗೇರ (20) ಮನೆಗೆ ನುಗ್ಗಿ ಹತ್ಯೆ ಮಾಡಿ ಪರಾರಿಯಾಗಿದ್ದ. ಈ ಘಟನೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಮೃತಳ ಕುಟುಂಬಸ್ಥರಿಗೆ ಪರಿಹಾರ ಮಂಜೂರು ಮಾಡಲು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದರು.

ಸರ್ಕಾರ ಈ ವರದಿಯನ್ನಾಧರಿಸಿ ಮೃತಳ ಕುಟುಂಬದ ಕಾನೂನು ಬದ್ಧ ನೈಜ ವಾರಸುದಾರರಿಗೆ 5 ಲಕ್ಷ ರೂ. ಪರಿಹಾರ ಮಂಜೂರು ಮಾಡಿದೆ. ಧಾರವಾಡ ಜಿಲ್ಲಾಧಿಕಾರಿ ಖಾತೆಗೆ ಹಣ ರವಾನಿಸಲಾಗಿದೆ ಎಂದು ಮುಖ್ಯಮಂತ್ರಿಗಳ ಕಾರ್ಯದರ್ಶಿ ಟಿ.ಎ.ಗೋಪಾಲ್ ಆದೇಶದಲ್ಲಿ ತಿಳಿಸಿದ್ದಾರೆ.

ಪರಿಹಾರ ಮಂಜೂರಾದ ಕುರಿತಂತೆ ಜಿಲ್ಲಾಧಿಕಾರಿ ದಿವ್ಯ ಪ್ರಭು ಮಾಹಿತಿ ನೀಡಿದ್ದಾರೆ. ಅಂಜಲಿ ಅಂಬಿಗೇರ ಕುಟುಂಬದವರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 5 ಲಕ್ಷ ರೂ. ಪರಿಹಾರ ಬಿಡುಗಡೆ ಆಗಿದೆ.

ಶೀಘ್ರವೇ ಶಹರ ತಹಶೀಲ್ದಾರ್ ಅವರ ಮೂಲಕ ಪ್ರಕ್ರಿಯೆ ಪ್ರಕಾರ ಕುಟುಂಬಸ್ಥರಿಗೆ ವಿತರಿಸಲಾಗುವುದು ಎಂದು 'ಈಟಿವಿ ಭಾರತ'ಕ್ಕೆ ತಿಳಿಸಿದ್ದಾರೆ.

# ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ದ್ರಾಕ್ಷಿ ಬೆಳೆಗಾರರಿಗೆ ಸಲಹೆ




**ಕೊಪ್ಪಳ :** ಸತತ ತುಂತುರು ಮಳೆ ಹಾಗೂ ಮೋಡಕವಿದ ವಾತಾವರಣದಿಂದಾಗಿ ದ್ರಾಕ್ಷಿ ಬೆಳೆಗೆ ವಿವಿಧ ರೋಗಗಳು ಕಂಡು ಬಂದಿದ್ದು, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಕೊಪ್ಪಳದ ವಿಜ್ಞಾನಿಗಳು ಇತ್ತೀಚೆಗೆ ತಾಲ್ಲೂಕಿನದ್ಯಾಂತ ದ್ರಾಕ್ಷಿ ತೋಟಗಳಿಗೆ ಭೇಟಿ ನೀಡಿ ರೋಗದ ಬಾಧೆ ನಿಯಂತ್ರಿಸಲು ದ್ರಾಕ್ಷಿ ಬೆಳೆಗಾರರಿಗೆ ಸಲಹೆಗಳನ್ನು ನೀಡಿದರು.

ಸತತ ಮಳೆಯಿಂದಾಗಿ ದ್ರಾಕ್ಷಿ ಬೆಳೆಯಲ್ಲಿ ಬೂಜುತುಪ್ಪಟ ರೋಗ, ಚಿಬ್ಬುರೋಗ ಅಲ್ಲದೇ ಕಾಳುಕೊಳೆ ರೋಗ ಕಾಣಿಸಿಕೊಂಡಿದ್ದು, ಈಗಾಗಲೇ ಚಾಟಣಿ ಮಾಡಿದ ತೋಟಗಳಲ್ಲಿ ಈ ರೋಗಗಳು ಹೆಚ್ಚಾಗಿ ಕಾಣಿಸಿಕೊಂಡಿವೆ. ಮಳೆಯಿಂದಾಗಿ ಶೇಕಡಾ 40 ರಷ್ಟುದ್ರಾಕ್ಷಿ ಬೆಳೆಗಳನ್ನು ಇನ್ನೂ ಚಾಟಣಿ ಮಾಡಲು ಅವಕಾಶ ಸಿಕ್ಕಿಲ್ಲ ಇದರಿಂದಾಗಿ ಇಳುವರಿ ಮೇಲೆ ದುಷ್ಪರಿಣಾಮ ಆಗಬಹುದು ಆದ್ದರಿಂದ ದ್ರಾಕ್ಷಿ ಬೆಳೆಗಾರರು ಅಕ್ಟೋಬರ ತಿಂಗಳಿನಲ್ಲಿಯೇ ಚಾಟಣಿ ಮಾಡಬೇಕು. ಚಾಟಣಿ ಮಾಡುವಾಗ ರೋಗಗ್ರಸ್ತ ಬಳ್ಳಿಯ ಭಾಗಗಳನ್ನು ಕತ್ತರಿಸಿ ಹಾಕಬೇಕು,. ರೋಗಗ್ರಸ್ತ ಎಲೆ ಕಡ್ಡಿಗಳನ್ನು ಆಯ್ದು ನಾಶಮಾಡಬೇಕು. ಚಿಗುರುಗಳನ್ನು ತೆಗೆಯುತ್ತಿರಬೇಕು. ಚಾಟಣಿ ಮಾಡಿದ 2 ದಿನಗಳೊಳಗೆ ಶೇಕಡಾ 1 ರ ಬೋರ್ಡೊ ದ್ರಾವಣವನ್ನು ಸಿಂಪರಿಸಬೇಕು. ಚಾಟಣಿ ಮಾಡದೇ ಉಳಿದಿರುವ ಬಳ್ಳಿಗಳನ್ನು ಶೇಕಡಾ 0.5 ಬೋರ್ಡೊ ದ್ರಾವಣವನ್ನು ಸಿಂಪಡಿಸಬೇಕು.

ಕರಪಾ, ಚಿಬ್ಬು ರೋಗವನ್ನು ಹತೋಟಿಗೆ ತರಲು ಥೈಯೋಫಿನೈಟ್ ಮಿಥೈಲ್ 2 ಗ್ರಾಂ. ಅಚಿತಚಿ ಕಾರ್ಬನ್‌ಡೈಜಿಮ್1 ಗ್ರಾಂ. ಎನ್ನುವ ಶಿಲಿಂದ್ರನಾಶಕಗಳನ್ನು ಸಿಂಪಡಿಸಬೇಕು. ಬೂಜುತುಪ್ಪಟ ರೋಗ ನಿಯಂತ್ರಿಸಲು ಫಾಸ್ಟೀಲ್ ಅಲೂಮಿನಿಯಂ 2 ಗ್ರಾಂ. 1 ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಇದರ ನಂತರ ಪರಿಣಾಮಕಾರಿ ಹತೋಟಿಗಾಗಿ ಸಂಯುಕ್ತ ಶಿಲೀಂದ್ರ ನಾಶಕಗಳಾದ ಮೆಲೋಡಿಡ್ಯುಯೋ 3 ಗ್ರಾಂ. ಅಥವಾರಿಡೊಮೀಲ್‌ಗೋಲ್ಡ್ 2.5 ಗ್ರಾಂ. 1 ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಮುಂಜಾಗ್ರತ ಕ್ರಮವಾಗಿ ಡಾರ್ಮೆಕ್ಸ್ ಲೇಪಿಸುವಾಗ 1 ಲೀಟರ ದ್ರಾವಣಕ್ಕೆ 6 ಗ್ರಾಂ. ಮ್ಯಾಂಕೋಜೆಬ್ ಶಿಲೀಂದ್ರ ನಾಶಕವನ್ನು ಬೆರೆಸಿ ಲೇಪಿಸಬೇಕು. ಅದೇ ರೀತಿ ಚಾಟಣಿ ಮಾಡಿದ 25–30ದಿನಗಳ ಅಂತರದಲ್ಲಿ ಜಿ.ಎ. ಬಳಸುವಾಗ 1 ಲೀಟರದ್ರಾವಣದಲ್ಲಿ 3 ಗ್ರಾಂ. ಅಲಿಯಟ್ ಬೆರೆಸಿ ಸಿಂಪಡಿಸಬೇಕು. ಆಲ್ಟರ್ನೇರಿಯಾ ಮತ್ತು ಇತರೆ ಶಿಲೀಂದ್ರಗಳಿಂದ ಹರಡುವ ಕೊಳೆ ರೋಗಕ್ಕೆ ಡೈಫೆನ್‌ಕೊನೋಜೊಲ್ 0.5 ಮಿಲೀ. ಪ್ರಮಾಣದಲ್ಲಿ ಸಿಂಪಡಿಸಬೇಕು. ಇದಲ್ಲದೇ 15 ದಿನಗಳ ಅಂತರದಲ್ಲಿ ದ್ರವರೂಪದ ಟ್ರೈಕೊಡರ್ಮಾ ಜೈವಿಕ ಶಿಲೀಂದ್ರ ನಾಶಕವನ್ನು ಸಿಂಪಡಿಸಬೇಕು. ತೇವಾಂಶ ಹೆಚ್ಚಾದಾಗ ಬ್ಲೋವರ್‌ನಿಂದ ಗಾಳಿ ಬೀಸುತ್ತಾ ತೇವಾಂಶವನ್ನು ಹೋಗಲಾಡಿಸಬೇಕು.

ಮುಖ್ಯವಾಗಿ ರೈತರು ಮಣ್ಣು ಮತ್ತು ಎಲೆ ವಿಶ್ಲೇಷಣೆ ಆಧಾರದ ಮೇಲೆ ಗೊಬ್ಬರಗಳನ್ನು ತಜ್ಞರ ಸಲಹೆಯಂತೆ ಬಳಸಬೇಕು. ಲಘು ಪೋಷಕಾಂಶಗಳನ್ನು ಸಗಣಿ ಬಗ್ಗಡದಲ್ಲಿ ಮಿಶ್ರ ಮಾಡಿ ಹನಿ ನೀರಾವರಿ ಮೂಲಕ ಬಿಡುತ್ತಿರಬೇಕು. ಜೀವಾಮೃತ, ಗೋಕೃಪಾಮೃತ ದ್ರಾವಣವನ್ನು ಬಳಸುತ್ತಿರುವುದು ಸೂಕ್ತ ಹಾಗೂ ದ್ರಾಕ್ಷಿ ಬೆಳೆಗಾರರು ಈ ಎಲ್ಲಾ ಸಲಹೆಗಳನ್ನು ಅನುಸರಿಸಬೇಕು ಎಂದು ತಿಳಿಸಿದರು.

# ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಗೆ ಜಿಲ್ಲಾ ಮಟ್ಟದ ಸಮಿತಿ ಪುನರ್ ರಚನೆ

**ಕೊಪ್ಪಳ :** ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು ಕೊಪ್ಪಳ ಜಿಲ್ಲಾ ಮಟ್ಟದ ಸಮಿತಿಯನ್ನು ಪುನರ್ ರಚನೆ ಮಾಡಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶಿಸಿದ್ದಾರೆ.

ಸರ್ಕಾರ ಆದೇಶದಂತೆ ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಮಹಿಳಾ ಅಧಿಕಾರಿಗಳು ಅಧ್ಯಕ್ಷರಿರುವ ಸಮಿತಿ ರಚಿಸುವುದು ಅವಶ್ಯವಿದ್ದು, ಜಿಲ್ಲಾ ಮಟ್ಟದ ಸ್ಥಳೀಯ ಸಮಿತಿಯನ್ನು ಈಗಾಗಲೇ ರಚಿಸಲಾಗಿರುತ್ತದೆ. ಸಮಿತಿಯಲ್ಲಿ ನೇಮಿಸಲಾದ ಕೆಲ ಅಧಿಕಾರಿಗಳು, ಸಿಬ್ಬಂದಿಗಳು ವರ್ಗಾವಣೆ ಮತ್ತು ಪದೋನ್ನತಿ ಹೊಂದಿ ಬೇರೆಡೆ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಸಮಿತಿಯನ್ನು ಪುನರ್ ರಚಿಸುವುದು ಅವಶ್ಯಕವಾಗಿರುವುದರಿಂದ ಕೊಪ್ಪಳ ಜಿಲ್ಲಾ ಮಟ್ಟದ ಸ್ಥಳೀಯ ಸಮಿತಿಯನ್ನು ಪರಿಷ್ಕರಿಸಲಾಗಿದೆ.

ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆನ ಲೈಂಗಿಕ ಕಿರುಕುಳ ತಡೆಗೆ ಕೊಪ್ಪಳ ಕೈ ಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರಾದ ಭಾರತಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು ಪುನರ್ ರಚಿಸಲಾಗಿದ್ದು, ಈ ಸಮಿತಿಯಲ್ಲಿ ಸದಸ್ಯರುಗಳಾಗಿ ಹಿಟ್ನಾಳ ಹೋಬಳಿಯ ಉಪ ತಹಶೀಲ್ದಾರಾರದ ರೇಖಾ ದಿಕ್ಷಿತ, ಯಲಬುರ್ಗಾ ಸಾಂತ್ವನ ಕೇಂದ್ರದ ಮುಖ್ಯಸ್ಥರಾದ ಸರೋಜ ಬಾಕಳೆ, ಕೊಪ್ಪಳ ಇನ್ನರವೀಲ್ ಕ್ಲಬ್‌ನ ತ್ರಿಶಲಾ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಲೀಗಲ್ ಕಂ ಪ್ರೊಬೆಷನ್ ಅಧಿಕಾರಿಗಳಾದ ಶಿವಲೀಲಾ ವನ್ನೂರು, ಕೊಪ್ಪಳ ಯುನಿಸೆಫ್ ಕಾರ್ಯಕ್ರಮ ವ್ಯವಸ್ಥಾಪಕರಾದ ಹರೀಶ್ ಜೋಗಿ ಹಾಗೂ ಜಿಲ್ಲೆಯ 7 ತಾಲ್ಲೂಕಿನ ತಹಶೀಲ್ದಾರರನ್ನು ಮತ್ತು ಸದಸ್ಯ ಕಾರ್ಯದರ್ಶಿಗಳಾಗಿ ಕೊಪ್ಪಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರನ್ನು ನೇಮಕ ಮಾಡಿದೆ.

ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು: ನೇರವಾಗಿ ಸಮಿತಿಗೆ ಬರುವ ಅಹವಾಲು/ದೂರು ಹಾಗೂ ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿ, ಜಿಲ್ಲಾ ಪಂಚಾಯತ್ ಕಚೇರಿಗಳಲ್ಲಿ ಬಂದ ದೂರುಗಳನ್ನು ನಿಯಮಾನುಸಾರ ವಿಲೇವಾರಿ ಮಾಡಬೇಕು. ಪ್ರತಿವಾರ ದೂರು ಪೆಟ್ಟಿಗೆಯನ್ನು ತೆ–ರೆದು ಅದರಲ್ಲಿರುವ ದೂರುಗಳ ಬಗ್ಗೆ ವಿಚಾರಣೆ ವರದಿಯನ್ನು ಜಿಲ್ಲಾ ಮಟ್ಟದ ಸಮಿತಿಯ ಅಧ್ಯಕ್ಷರಿಗೆ ಸಲ್ಲಿಸಬೇಕು. ದೂರು ಪೆಟ್ಟಿಗೆಯಲ್ಲಿ ಯಾವುದೇ ದೂರುಗಳು ಇಲ್ಲದಿದ್ದರೆ, ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸಿ ವರದಿ ಸಲ್ಲಿಸಬೇಕು. ಎಲ್ಲಾ ಕಚೇರಿಗಳಲ್ಲಿ ದೂರು ಪೆಟ್ಟಿಗೆ ಸ್ಥಾಪಿಸುವಂತೆ ಕ್ರಮವಹಿಸುವುದು ಮತ್ತು ದೂರು ಪೆಟ್ಟಿಗೆ ರಚನೆಯಾದ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಬೇಕು. ಸಮಿತಿಗೆ ಸಂಬಂಧಿಸಿದ ಸಭೆಗಳ ಆಯೋಜನೆ, ಪತ್ರವ್ಯವಹಾರ, ನೋಟಿಸ್‌ಗಳ ಸಿದ್ಧತೆ ಮತ್ತು ತಲುಪಿಸುವಿಕೆ ಮತ್ತು ಸಮಿತಿಯ ಸಭೆಗಳ ನಡಾವಳಿಗಳನ್ನು ಹಾಗೂ ಸಮಿತಿಯ ಪ್ರಗತಿಯ ಮಾಹಿತಿಯ ಸಂಪೂರ್ಣ ದಾಖಲಾತಿಗಳನ್ನು ಸದಸ್ಯ ಕಾರ್ಯದರ್ಶಿಗಳು ನಿರ್ವಹಿಸಬೇಕು. ಸಮಿತಿಯ ಸಭೆಗಳು ಹಾಗೂ ದೂರು/ಅಹವಾಲು ವಿಚಾರಣೆಗಳು ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಪ್ಪಳ ಇಲ್ಲಿ ಅಥವಾ ಸಮಿತಿಯ ಅಧ್ಯಕ್ಷರು ಸೂಚಿಸಿ ತೀರ್ಮಾನಿಸುವ ಸ್ಥಳದಲ್ಲಿ ಆಯೋಜಿಸಬೇಕು. ಕಾಲಕಾಲಕ್ಕೆ ಬದಲಾವಣೆಯಾಗುವ ಆದೇಶಗಳಿಗೆ ಅನುಗುಣವಾಗಿ ಮತ್ತು ನಿಯಮಾನುಸಾರ ಸಮಿತಿ ಕಾರ್ಯನಿರ್ವಹಿಸಬೇಕೆಂದು ಪ್ರಕಟಣೆ ತಿಳಿಸಿದೆ.

# ವಾಲ್ಮೀಕಿ ವಿಚಾರಧಾರೆಗಳನ್ನ ಜೀವನದಲ್ಲಿ ಅಳವಡಿಸಿಕೊಳ್ಳಿ: ಶಾಸಕ ಲಕ್ಷ್ಮಣ ಸವದಿ



**ಅಥಣಿ :** ನಮ್ಮ ದೇಶದಲ್ಲಿ ಆಗಿ ಹೋದ ಸಂತ ಮಹಾಂತರು. ಮಹಾ ಪುರುಷರು, ಸಮಾಜ ಸುಧಾರಕರು, ಜನರ ಉದ್ಧಾರಕ್ಕಾಗಿ, ನಾಡಿನ ಏಳ್ಗೆಗಾಗಿ ಕೊಡುಗೆ ನೀಡಿದವರ ಸ್ಮರಣೆ, ಉತ್ಸವ, ಜಯಂತಿಗಳನ್ನು ಆಯಾ ಜಾತಿಗಳಿಗೆ ಮಾತ್ರ ಸೀಮಿತವಾಗಿರದೆ ಎಲ್ಲ ಜಾತಿ ಜನಾಂಗದವರು ಒಟ್ಟಾಗಿ ಆಚರಿಸುವಂತೆ ಆಗಬೇಕು ಎಂದು ಮಾಜಿ ಡಿಸಿಎಂ ಹಾಗೂ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ತಾಲೂಕಾ ಆಡಳಿತ. ತಾಲೂಕಾ ಪಂಚಾಯತ್. ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಥಣಿ ಇವರ ಸಂಯುಕ್ತಾಶ್ರಯದಲ್ಲಿ ತಾಪಂ ಸಭಾಭವನದಲ್ಲಿ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು ಮಹರ್ಷಿ ವಾಲ್ಮೀಕಿಯವರ ತತ್ವ ಸಂದೇಶಗಳನ್ನು, ಅವರ ವಿಚಾರಧಾರೆಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ವಿವಿಧಸಮುದಾಯದವರಿಗಾಗಿಕಟ್ಟಿದಅನೇಕಭವನಗಳಿದ್ದು ಆ ಭವನಗಳಲ್ಲಿ ತಿಂಗಳಿಗೊಮ್ಮೆಯಾದರೂ ಆಯಾ ಸಮುದಾಯದ ಮಹಾ ಪುರಷರ ಮಹಾತ್ಮರ ಕುರಿತು ಚಿಂತನೆ ಮಂತನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಸರ್ಕಾರದ ಮೀಸಲಾತಿ ಸೌಲಭ್ಯವು ಸಮಾಜದ ಕಟ್ಟ ಕಡೆ ವ್ಯಕ್ತಿಗೂ ಸಿಗಬೇಕು. ಪ್ರತಿಯೊಬ್ಬರೂ ಉನ್ನತ ಶಿಕ್ಷಣ ಪಡೆದು ಪರಿಶ್ರಮದಿಂದ ಮುಂದೆ ಬಂದು ಸಮಾಜಕ್ಕೆ ಮಾದರಿಯಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕಿಯಾಗಿ ಆಗಮಿಸಿದ್ದ ಡಾ.ರತ್ನಾ ಬಾಳಪ್ಪನವರ ಮಾತನಾಡಿ ಮಹರ್ಷಿ ವಾಲ್ಮೀಕಿ ಒಬ್ಬ ರಾಜ ನೀತಿವಂತ, ತತ್ವಜ್ಞಾನಿ. ವಿಜ್ಞಾನಿ ತಂತ್ರಜ್ಞಾನಿ ಹಾಗೂ ಆರೋಗ್ಯ ಶಾಸ್ತ್ರವನ್ನು ಬಲ್ಲವನಾಗಿದ್ದ. ಆತನ ವಿಚಾರಧಾರೆಗಳನ್ನು ನಾವೆಲ್ಲ ಅಳವಡಿಕೊಳ್ಳಬೇಕು ಎಂದು ಹೇಳಿದಳು.ವಾಲ್ಮೀಕಿ ಸಮಾಜದವರಿಗೆ 7% ಎಸ್.ಟಿ.ಮೀಸಲಾಯಿತಿ ಇದೆ. ಇದರಲ್ಲಿ ಬೇರೆ ಬೇರೆ ಸಮಾಜದವರನ್ನು ತಂದು ಸೇರಿಸುವದು ಸರಿಯಲ್ಲ. ಇದರಿಂದ ವಾಲ್ಮೀಕಿ ಸಮಾಜಕ್ಕೆ ಸಿಗಮಬೇಕಾದ ಸೌಲಭ್ಯ ಸಿಗುವದು ಕಷ್ಟವಾಗುತ್ತದೆ ಎಂದು ಹೇಳಿದರು.

ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪುರಸಭೆ ಅಧ್ಯಕ್ಷೆ ಶಿವಲೀಲಾ ಬುಟಾಳಿ ಉಪಾಧ್ಯಕ್ಷೆ ಭುವನೇಶ್ವರಿ ಯಕ್ಕಂಚಿ ತಹಸಿಲ್ದಾರ ಸಿದ್ರಾಯ ಭೋಸಗಿ ತಾಪಂ ಅಧಿಕಾರಿ ಶಿವಾನಂದ ಕಲ್ಲಾಪೂರ. ಸಮಾಜ ಕಲ್ಯಾಣ ಇಲಾಖೆ ಬಸವರಾಜ ಯಾದವಾಡ ಭಾಗವಹಿಸಿ ಮಾತನಾಡಿದರು.

ಈ ಸಮಾರಂಭದಲ್ಲಿ ಪುರಸಭೆ ಸದಸ್ಯರಾದ ರಾಜು ಗುಡೋಡಗಿ ಪ್ರಮೋದ ಬಿಳ್ಳೂರ. ಮಲ್ಲಿಕಾರ್ಜುನ ಬುಟಾಳಿ ಅಧಿಕಾರಿಗಳಾದ ವೆಂಕಟೇಶ ಕುಲಕುರ್ಣಿ ವೀರಣ್ಣ ವಾಲಿ ರವಿಂದ್ರ ಮುರಗಾಲಿ. ರೇಣುಕಾ ಹೊಸಮನಿ. ರಾಮಗೌಡ ಪಾಟೀಲ. ಉಪ ತಹಶೀಲ್ದಾರ್ ಮಹಾದೇವ ಬಿರಾದಾರ. ಡಾ ಬಸಗೌಡಾ ಕಾಗೆ. ಪ್ರವೀಣ ಹುಣಸಿಕಟ್ಟಿ ಮುಂತಾದವರು ಉಪಸ್ಥಿತರಿದ್ದರು

ಕಾರ್ಯಕ್ರಮದಲ್ಲಿ ತಹಶೀಲ್ದಾರ ಸಿದರಾಯ ಭೋಸಗಿ ಸ್ವಾಗತಿಸಿದರು ಕಾರ್ಯಕ್ರಮವನ್ನ ಸಂಗಮೇಶ ಹಚಡದ ನಿರೂಪಿಸಿದರು ಸಮಾಜ ಕಲ್ಯಾಣ ಇಲಾಖೆಯ ಬಸವರಾಜ ಯಾದವಾಡ ವಂದಿಸಿದರು.

# ತಂಬಾಕು ಮುಕ್ತ ಯುವ ಅಭಿಯಾನ: ಪೋಸ್ಟರ್ ಬಿಡುಗಡೆ



**ಕೊಪ್ಪಳ :** ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ "ತಂಬಾಕು ಮುಕ್ತ ಯುವ ಅಭಿಯಾನ 2.0" ಅಂಗವಾಗಿ ಜಿಲ್ಲಾಧಿಕಾರಿಗಳಾದ ನಲೀನ ಅತುಲ್ ಅವರು ಐಇಸಿ ಪೋಸ್ಟರ್ ಬಿಡುಗಡೆಗೊಳಿಸಿದೆರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಐಇಸಿ ಪೋಸ್ಟರ್ ಬಿಡುಗಡೆ ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ ಲಿಂಗರಾಜು ಟಿ., ಕಾರ್ಯಕ್ರಮದ ಅನುಷ್ಠಾನ ಅಧಿಕಾರಿಗಳಾದಡಾ.ನಂದಕುಮಾರಹೆಚ್‌ಸೇರಿದಂತೆ ಆರೋಗ್ಯ ಇಲಾಖೆ ವಿವಿಧ ಕಾರ್ಯಕ್ರಮಗಳ ಅನುಷ್ಠಾನ ಅಧಿಕಾರಿಗಳು ಉಪಸ್ಥಿತರಿದ್ದರು.

# ಜೀವನದ ಮೌಲ್ಯಗಳನ್ನು ಜಗತ್ತಿಗೆ ತಿಳಿಸಿದ್ದು ಮಹರ್ಷಿ ವಾಲ್ಮೀಕಿ: ಡಾ.ವೀರಣ್ಣ ಚರಂತಿಮಠ

**ಬಾಗಲಕೋಟೆ:** ರಾಮಾಯಣ ಇದು ದೇಶಿ ಪರಂಪರೆಯ ಭಾರತಿಯರ ಅಸ್ಮೀತೆಯಾಗಿದ್ದು, ಜೀವನ ಮೌಲ್ಯಗಳನ್ನು ರಾಮಯಣದ ಮೂಲಕ ಜಗತ್ತಿಗೆ ತಿಳಿಸಿದ್ದು ಆದಿಕವಿ ಮಹರ್ಷಿ ವಾಲ್ಮೀಕಿಯವರು ಎಂದು ಮಾಜಿ ಶಾಸಕರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ನಗರದ ಶಿವಾನಂದ ಜೇನ್ ನಲ್ಲಿ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ವಿಧಾಸಭಾ ಮತಕ್ಷೇತ್ರದಿಂದ ಹಮ್ಮಿಕೊಂಡ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಮೂಲಕ ಗೌರವ ನಮನ ಸಲ್ಲಿಸಿ ಮಾತನಾಡಿದರು.




ಸಂಸ್ಕೃತದಲ್ಲಿ ಮೊಟ್ಟ ಮೊದಲಿಗೆ ರಾಮಾಯಣ ಮಹಾಕಾವ್ಯ ರಚಿಸುವ ಮೂಲಕ ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ಅನನ್ಯವಾದ ಕೊಡುಗೆಯನ್ನು ನೀಡಿರುವ ಆದಿಕವಿ ಮಹರ್ಷಿ ವಾಲ್ಮೀಕಿಯವರಾಗಿದ್ದು, ಅವರ ತವರು ಮನೆಯಾದ ಈ ನೆಲದಲ್ಲಿ ನೂರಾರು ಪಾತ್ರಗಳನ್ನು ಒಂದೇ ಕಾವ್ಯದಲ್ಲಿ ಸೃಷ್ಟಿಸಿ, ಆ ಪಾತ್ರಗಳ ಮೂಲಕ ಮಾನವೀಯತೆ,ಸಮತೆ,ಮಮತೆ,ಭ್ರಾತೃತ್ವ,ಕರುಣೆ,ತ್ಯಾಗ, ಧರ್ಮರಕ್ಷಣೆ, ರಾಜನೀತಿ ಮುಂತಾದ ಮೌಲ್ಯಗಳನ್ನು ಪ್ರತಿಪಾದಿಸುವ ಮೂಲಕ ಮನುಕುಲದ ಉದ್ಧಾರಕ್ಕಾಗಿ ಮಾರ್ಗದರ್ಶನವನ್ನು ನೀಡಿದ್ದಾರೆ, ಭಾರತೀಯರ ಜೀವನ ಮೌಲ್ಯಗಳನ್ನು ಮಹಾಕಾವ್ಯ ರಾಮಾಯಣದ ಮೂಲಕ ಜಗತ್ತಿಗೆ ಸಾರಿದ್ದಾರೆ, ಮಹರ್ಷಿ ವಾಲ್ಮೀಕಿಂ-ರುವರು ಅವರು ಇಡಿ ಹಿಂದೂ ಸಮಾಜ ಸೇರಿದಂತೆ ಮನುಕುಲಕ್ಕೆ ಗುರುಗಳಾದವರು. ದೇಶದಲ್ಲಿರುವ ಎಲ್ಲ ಮಹರ್ಷಿಗಳಿಗೆ ಋಷಿಮುನಿಗಳಿಗೆ, ಸಾಧಕರಿಗೆ ಜಾತಿಗಳ ಮೂಲಕ ಒಂದು ವರ್ಗಕ್ಕೆ ಸೀಮಿತಮಾಡಬಾರದು, ಎಲ್ಲರೂ ಮನುಕುಲದ ಉದ್ದಾರಕ್ಕಾಗಿ ಶ್ರಮಿಸಿದವ-ರಿದ್ದಾರೆ, ಅಂಥ ಪುಣ್ಯ ಪುರುಷರಿಂದಾಗಿ ಇಂದು ಹಿಂದೂ ಸಮಾಜ ಗಟ್ಟಿಯಾಗಿದೆ ಎಂದರು.

> **ಮಹರ್ಷಿಗಳು, ಋಷಿಮುನಿಗಳು, ಸಾಧಕರುಗಳಿಗೆ ಜಾತಿಗಳ ಮೂಲಕ ಒಂದು ವರ್ಗಕ್ಕೆ ಸೀಮಿತಮಾಡಬಾರದು, ಎಲ್ಲರೂ ಮನುಕುಲದ ಉದ್ದಾರಕ್ಕಾಗಿ ಶ್ರಮಿಸಿದವರಿದ್ದಾರೆ, ಅಂಥ ಪುಣ್ಯ ಪುರುಷರಿಂದಾಗಿ ಇಂದು ಹಿಂದೂ ಸಮಾಜ ಗಟ್ಟಿಯಾಗಿದೆ. ಡಾ. ವೀರಣ್ಣ ಚರಂತಿಮಠ ಮಾಜಿ ಶಾಸಕರು ಪೋಟೋ01 ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಮೂಲಕ ಗೌರವ ನಮನ ಸಲ್ಲಿಸಲಾಯಿತು.**

ಕಾರ್ಯಕ್ರಮದಲ್ಲಿ ಬಿಟಿಡಿಎ ಮಾಜಿ ಆದ್ಯಕ್ಷ ಜಿ. ಎನ್.ಪಾಟೀಲ,ಡಾ.ಎಂ.ಎಸ್.ದಡ್ಡೆನ್ನವರ,ಗುಂಡುರಾವ ಶಿಂದೆ, ವಾಲ್ಮೀಕಿ ಸಮಾಜದ ಮುಖಂಡರಾದ ಅಯ್ಯಪ್ಪ ವಾಲ್ಮೀಕಿ,ರಾಜುನಾಯ್ಕರ,ಯಲ್ಲಪ್ಪಖ್ಯಾದಿಗೇರಿನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ,ಉಪಾಧ್ಯಕ್ಷೆ ಶೋಭಾ ರಾವ, ಯಲ್ಲಪ್ಪನಾರಾಯಣಿ, ಶಶಿಕಲಾ ಮಜ್ಜಗಿ, ಶಿವಾನಂದ ಟವಳಿ,ಸತ್ಯನಾರಾಯಣ ಹೆಮಾದ್ರಿ, ರಾಜು ರೇವಣ-ಕರ್, ಯಲ್ಲಪ್ಪ ಬೇಂಡಿಗೇರಿ, ಮುತ್ತಣ್ಣ ಬೇಣ್ಣೂರ.ಶಂಕರ ಗಲಗ, ಗಣೇಶ ಲಗಳಿ, ರವಿ ನಾಯಕ್,ಮಂಜು ಪಾಟೀಲ, ಯಲ್ಲಪ್ಪ ಭಜಂತ್ರಿ, ರಾಜು ಕೋಟಿಕಲ್ ಬಸವರಾಜ ಹುನಗುಂದ, ಉಮೇಶ ಹಂಚಿನಾಳ, ಪಂಕಜ್ ನಿಕ್ಕಮ್ ಸೇರಿದಂತೆ ಅನೇಕರು ಇದ್ದರು.

# ಅಮಿತ್ ಷಾ ಅವರ ಮಾತು ಕೇಳಿದ್ದೆ ತಪ್ಪಾಯ್ತು, ಈಶ್ವರಪ್ಪ

**ಬಾಗಲಕೋಟೆ :** ರಾಯಣ್ಣ ಬ್ರಿಗೇಡ್ ವಿಚಾರವಾಗಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಮಾತು ಕೇಳಿದ್ದೆ ತಪ್ಪಾಯ್ತು ಎಂದು ಮಾಜಿ ಉಪಮುಖ್ಯಮಂತ್ರಿ ಈಶ್ವರಪ್ಪ ಅವರು ಬೇಸರ ವ್ಯಕ್ತಪಡಿಸಿದರು.

ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕಳೆದ ಬಾರಿ ರಾಯಣ್ಣ ಬ್ರಿಗೇಡ್ ಗೆ ಹಿಂದುಳಿದ, ದಲಿತರು ಹಾಗೂ ಸಮಸ್ತ ಹಿಂದೂ ಸಮಾಜ ಹಾಗೂ ಎಲ್ಲರೂ ನಿರೀಕ್ಷೆ ಮೀರಿ ಪಕ್ಷಾತೀತವಾಗಿ ಬೆಂಬಲ ನೀಡಿದ್ದರು. ಅದನ್ನು ಕಂಡು ಸಂತೋಷಪಡುವುದನ್ನು ಬಿಟ್ಟು ಬಿಜೆಪಿ ನಾಯಕರಾದ ಅಮಿತ್ ಷಾ ಬಳಿ ಹೋಗಿ ದೂರು ನೀಡಿದ ಹಿನ್ನೆಲೆಯಲ್ಲಿ ಶಾ ಅವರು ನನ್ನನ್ನು ಕರೆಸಿ ರಾಯಣ್ಣ ಬ್ರಿಗೇಡ್ ಯಾಕೆ ಬೇಕು? ಬೇಡಾ ಅಂತ ಹೇಳಿದರು. ಯಾಕೆ ಬೇಡ ಅಂದರೆ ಅವರ ಬಳಿ ಉತ್ತರ ಸಿಗಲಿಲ್ಲ. ಹಿರಿಯರ ಮಾತು ಕೇಳುವುದು ನನ್ನ ಸ್ವಭಾವವಾಗಿದ್ದು ಅವರ ಮಾತು ಕೇಳಿದ್ದೆ ಇಂದು ತಪ್ಪಾಯ್ತು ಎಂದು ಅನಿಸುತ್ತಿದೆ. ಒಂದು ವೇಳೆ ಸಂಘಟನೆ ಮುಂದುವ-ರಿಸಿದ್ದರೆ ಎಲ್ಲರಿಗೂ ನ್ಯಾಯ ಸಿಗುತ್ತಿತ್ತು ಎಂದರು. ಈಗ ಆರಂಭವಾಗುವ ಬ್ರಿಗೇಡ್ ಯಾವ ಕಾರಣಕ್ಕೂ ನಿಲ್ಲಲ್ಲ. ಇತ್ತೀಚೆಗೆ ಜಮಖಂಡಿಯಲ್ಲಿ ನಡೆದ ಸಭೆಯೊಂದರಲ್ಲಿ ಅನೇಕ ಮಠಾಧೀಶರು ನಾನು ಹಾಗೂ ಯತ್ನಾಳ್ ಪಾಲ್ಗೊಂಡ ಸಂದರ್ಭದಲ್ಲಿ ರಾಯಣ್ಣ, ಚೆನ್ನಮ್ಮನ ರಕ್ತ ಹಂಚಿಕೊಂಡು ಹುಟ್ಟಿದ್ದೀರಿ! ಹಿಂದುಳಿದ ಸಮಸ್ತ ಹಿಂದುಗಳ ಏಳಿಗೆಗೆ ಕೆಲಸ ಮಾಡಿ ಎಂದು ಸಾಧು-ಸಂತರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು. ಎಲ್ಲರೂ ಹಿಂದುಳಿದ ದಲಿತರನ್ನು ಬಳಸಿಕೊಳ್ಳುತ್ತಾರೆ ಆದರೆ ಯಾರಿಗೂ ನ್ಯಾಯ ಕೊಡಲು ಆಗುತ್ತಿಲ್ಲ. ಸಣ್ಣ ಸಣ್ಣ ಸಮಾಜಗಳನ್ನು ಸಂಘಟಿತರಾಗಿ ಹೊರಬರಲು ಆಗುತ್ತಿಲ್ಲ. ಇಂತಹವ-ರಿಗಾಗಿಯೇ ನಾವು ಬ್ರಿಗೇಡ್ ಮಾಡುತಿ-ದ್ದೇವೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವೀರಣ್ಣ ಹಳೇಗೌಡರ ಸೇರಿದಂತೆ ಇತರರು ಇದ್ದರು.



> **ಬಿಎಸ್‌ವೈ ಕುಟುಂಬ ವಿರುದ್ಧ ವಾಗ್ದಾಳಿ**
>
> **ಭಾರತೀಯ ಜನತಾ ಪಕ್ಷವೂ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಕುಟುಂಬದ ಕೈಯಲ್ಲಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಈಶ್ವರಪ್ಪ ಯಡಿಯೂರಪ್ಪ ಕುಟುಂಬದ ವಿರುದ್ಧ ಕಿಡಿಕಾರಿದರು. ಪಕ್ಷದಲ್ಲಿ ಇದ್ದವರು ಕುಟುಂಬ ರಾಜಕಾರಣ ಮಾಡುತ್ತಿದ್ದಾರೆ. ಬಿಜೆಪಿಯಲ್ಲಿ ಹೊಂದಾಣಿಕೆ ರಾಜ-ಕಾರಣ ಇರಲಿಲ್ಲಾ. ಹೊಂದಾಣಿಕೆ ಹಾಗೂ ಕುಟುಂಬ ರಾಜಕಾರಣದಿಂದ ಬಿಜೆಪಿ ಪಕ್ಷ ಶುದ್ಧೀಕರಣವಾಗಬೇಕು ಎಂದು ಅವರು ಹೇಳಿದರು.**

# ಹಲಕುರ್ಕಿ ಪಿಕೆಪಿಎಸ್ ಅಧ್ಯಕ್ಷರಾಗಿ ಮುತ್ತು ನಾಯ್ಕರ, ಉಪಾಧ್ಯಕ್ಷರಾಗಿ ರಮೇಶ ತಳವಾರ ಅವಿರೋಧ ಆಯ್ಕೆ



**ಬಾದಾಮಿ :** ತಾಲೂಕಿನ ಹಲಕುರ್ಕಿ ಗ್ರಾಮದ ಪ್ರಾಥ-ಮಿಕ ಕೃಷಿ ಪತ್ತಿನ ಸಹಕಾರ ಸಂಘ (ಪಿಕೆಪಿಎಸ್)ದ ನೂತನ ಅಧ್ಯಕ್ಷರಾಗಿ ಮುತ್ತಪ್ಪ ನಿಂಗಪ್ಪ ನಾಯ್ಕರ ಹಾಗೂ ಉಪಾಧ್ಯಕ್ಷರಾಗಿ ರಮೇಶ ಸಣ್ಣತಮ್ಮಪ್ಪ ತಳವಾರ ಇವರು ಅವಿರೋಧವಾಗಿ ಆಯ್ಕೆಯಾಗಿದರು.. ಬುಧವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಬ್ಬರು ನಾಮಪತ್ರ ಸಲ್ಲಿಕೆ ಮಾಡಿದ ಪ್ರಯುಕ್ತ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಬಿ.ಬಿ.ಪಟ್ಟದಕಲ್ ಫಲಿತಾಂಶವನ್ನು ಘೋಷಿಸಿದರು.

ವಿಜಯೋತ್ಸವ: ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಬೆಂಬಲಿಗರು ಗುಲಾಲು ಎರಚಿ, ಪಟಾಕ್ಷಿ ಸಿಡಿಸಿ ಸಂಭ್ರಮಿಸಿದರು. ಚುನಾವಣೆಯಲ್ಲಿ ಸಿಡಿಒ ಬೆಳಗಲ್ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಸಂಘದ ಆಡಳಿತ ಮಂಡಳಿಯ ಒಟ್ಟು 12 ಸದಸ್ಯರಲ್ಲಿ 10 ಸದಸ್ಯರು ಈ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

# ಕಠಿಣ ಕ್ರಮಕ್ಕೆ ಆಗ್ರಹಿಸಿ: ಮನವಿ ಸಲ್ಲಿಕೆ



**ಕಲಾದಗಿ :** ಉತ್ತರ ಪ್ರದೇಶದ ಗಾಜಿಯಾಬಾದನ ದಸ್ನಾ ದೇವಿ ದೇವಸ್ಥಾನದ ಅರ್ಚಕ ಯತಿ ನರಸಿಂಹಾನಂದ ಸರಸ್ವತಿ ಸಾರ್ವಜನಿಕ ಕಾರ್ಯಕ್ರಮದಲ್ಲಿ ಪ್ರವಾದಿ ಮೊಹಮ್ಮದ್ ಪೈಗಂಬರ್ ಹಾಗೂ ಖುರಾನ್ ಬಗ್ಗೆ ವಿವಾದಾತ್ಮಕ ಭಾಷಣ ಖಂಡಿಸಿ ಗ್ರಾಮದ ಅಂಜುಮನ್ ಮಿಲ್ಲತ್ ಸೋಶಿಯಲ್ ವೆಲ್ಫೇರ್ ಸೊಸೈಟಿ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಯಿತು.

ದಸ್ನಾದೇವಿದೇವಸ್ಥಾನದಅರ್ಚಕ ಯತಿ ನರಸಿಂಹಾನಂದ ಸರಸ್ವತಿ ಅವರನ್ನು ಬಂಧಿಸಿದ್ದು, ಕಠಿಣ ಕಾನೂನುಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು.

ಗ್ರಾಮದ ಜಾಮಿಯಾ ಮಸೀದಿಯಿಂದ ಪ್ರಾರಂಭವಾದ ಪ್ರತಿಭಟನೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಾಡಕಛೇರಿ ಕಾರ್ಯಾಲಯ ತಲುಪಿ, ಉಪ ತಹಶೀಲ್ದಾರ್ ಆರ್. ಆರ್. ಕುಲಕರ್ಣಿ ಅವ-ರಿಗೆ ಅಂಜುಮನ್ ಮಿಲ್ಲತ್ ಸೊಸೈಟಿ ವತಿಯಿಂದ ಮನವಿ ಸಲ್ಲಿಸಲಾಯಿತು.

ಕೆಪಿಸಿಸಿ ಉಪಾಧ್ಯಕ್ಷ ಎಂ.ಬಿ. ಸೌದಾಗರ ಅಂಜುಮನ್ ಮಿಲ್ಲತ್ ಅಧ್ಯಕ್ಷ ಹಾಜಿ ರಫೀಕ್ ಬೇಪಾ-ರಿ,ಉಪಾಧ್ಯಕ್ಷ ಚಾಂದ್ ಕಲಾದಗಿ, ಹಾರುನ ಪಠಾಣ.

ಜೆ ಡಿ ಚೌಧರಿ ಬಂದೇನವಾಜ ಸೌದಾಗರ, ಎಚ್. ಎಂ. ಹೊಸಕೋಟಿ, ಸೈಪುದ್ದೀನ್ ಹುಬ್ಬಳ್ಳಿ, ಇಬ್ರಾಹಿಂ ಸೋಲ್ಜರ್. ರಾಜೆಸಾಬ ಆದ್ವಾನಿ . ಅಮೀನ್ ಸಾಬ ನದಾಫ್. ಇದ್ದರು.

# ರಾಮನ ಆದರ್ಶ ಪರಿಚಯಿಸಿದ ಶ್ರೇಯಸ್ಸು ಮಹರ್ಷಿ ವಾಲ್ಮೀಕಿಯವರದ್ದು

**ಬೀಳಗಿ :** ಮನುಕುಲದಲ್ಲಿ ಸುಂದರ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ರಾಮಾಯಣ ಮತ್ತು ಮಹಾಭಾರತ ಶ್ರೇಷ್ಠಗ್ರಂಥಗಳಾಗಿವೆ. ಸಹೋದರತ್ವದ ಬಾಂಧವ್ಯ ಬಿತ್ತಿದ ರಾಮನ ಆದರ್ಶಗಳನ್ನು, ರಾಮರಾಜ್ಯದ ಕಲ್ಪನೆಗಳನ್ನು ರಾಷ್ಟ್ರಕ್ಕೆ ಪರಿಚಯಿಸಿದ್ದು ಮಹರ್ಷಿ ವಾಲ್ಮೀಕಿಯವರಿಗೆ ಸಲ್ಲುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್. ಆರ್.ನಿರಾಣಿ ಹೇಳಿದರು. ಪಟ್ಟಣದ ವಿನಿ ವಿಧಾನ ಸೌಧ ಆವರಣದಲ್ಲಿ ತಾಲೂಕಾ ಆಡಳಿತ, ತಾಪಂ, ಪಪಂ ಮತ್ತು ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಸಮಾರಂಭದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.



ಮಹರ್ಷಿ ವಾಲ್ಮಿಕಿಯವರ ಆದರ್ಶ ಗುಣಗಳನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯವಾಗಬೇಕು. ಅವರ ಬದುಕಿನ ಒಂದು ಘಟನೆ ಅವರ ಜೀವಮಾನವನ್ನೆ ಬದಲಿಸಿತು ಅದರಿಂದ ರಾಮಾಯಣ ಗ್ರಂಥ ಬರೆಯಲು ಪ್ರೇರಣೆಯಾಯಿತು. ಇವರ ಪ್ರೇರಣೆ ನಮಗೆ ಇಂದು ಮಾರ್ಗದರ್ಶಣವಾಗದೆ. ಸಮಾಜದ ಮಾತೆಯರು ತಮ್ಮ ಮಕ್ಕಳಿಗೆ ಗುಣಮಟ್ಟದಶಿಕ್ಷಣದಜೊತೆಗೆಸಂಸ್ಕಾರವನ್ನು ನೀಡಬೇಕು. ಶೈಕ್ಷಣಿಕವಾಗಿ ಮಕ್ಕಳನ್ನು ಎಲ್ಲ ರಂಗದಲ್ಲೂ ಬೆಳೆಸಿ ಸಮಾಜದ ಏಳ್ಗೆಗೆ ಸಹಕರಿಸಬೇಕು. ಸಮಾಜಕ್ಕೆ ಸರಕಾರ ನೀಡುವ ಸಕಲಸೌಲಭ್ಯಗಳನ್ನು ಸದುಪಯೋಗ ಪಡೆಸಿಕೊಂಡು ಸಮಾಜದ ಉನ್ನತಿಗೆ ದಾರಿದೀಪವಾಗಬೇಕು ಎಂದರು.

ಸಮಾರಂಭಕ್ಕಿಂತ ಮೊದಲು ಪಟ್ಟಣದ ವೀರ ಸಿಂಧೂರ ಲಕ್ಷ್ಮಣ ವೃತ್ತದಿಂದ ಸಕಲ ವಾಧ್ಯವೃಂದದೊಂದಿಗೆ ಬಂದ ಸುಮಂಗಲಿಯರು ರೇಷ್ಮೆ ಸೀರೆತೊಟ್ಟು ಸಿಂಗಾರಗೊಂಡು ಕುಂಭಮೇಳ ಹೊತ್ತು ಕಳೆತಂದರೆ. ಯುವಕರು ಬೈಕ್‌ರ್ಯಾಲಿ ಮೂಲಕ ಗಮನಸೆಳೆದರು.

ಅತಿಥಿ ಉಪನ್ಯಾಸವನ್ನು ಡಿಎಸ್‌ಎಸ್ ಬೆಳಗಾವಿ ವಿಭಾಗೀಯ ಅಧ್ಯಕ್ಷ ಮಹಾದೇವ ಹಾದಿಮನಿ ನೀಡಿದರು. ತಹಶೀಲ್ದಾರ ವಿನೋದ ಹತ್ತಳ್ಳಿ, ತಾಪಂ ಇಒ ಅಭಯಕುಮಾರ ಮೊರಬ, ಪಪಂ ಮುಖ್ಯಾಧಿಕಾರಿ ದೇವೇಂದ್ರ ಧನಪಾಲ್, ಸಮಾಜ ಕಲ್ಯಾಣ ಇಲಾಖೆ ಇಡಿ ಸಿ.ಎಸ್.ಗಡ್ಡದೇವರಮಠ, ಸಿಡಿಪಿಒ ಬಿ.ಜಿ.ಕಾವಟೇಕರ್, ಸಿಪಿಐ ಬಸವರಾಜ್ ಹಳಬನ್ನವರ್, ಎಸ್‌ಎಲ್ಒ ಉದಯ ಕುಂಬಾರ್,ಬಿಇಒ ಆರ್.ಎಸ್.ಆದಾಪೂರ, ತಾಲೂಕಾ ವಾಲ್ಮೀಕಿ ಸಮಾಜದ ಅಧ್ಯಕ್ಷ ಟಿ.ವೈ.ಜಾನಮಟ್ಟಿ, ಶಂಕರ ತಳವಾರ್ ಇತರರು ಇದ್ದರು.

# ಇಂದು ಕವಿ ಸಮ್ಮೇಳನ ಹಾಗೂ ಮುಷಾಯಿರಾ-ಹಬೀಬ್ ಖಾನ್

**ಕೊಪ್ಪಳ :** ಫಿರ್ದೋಸ ಸಾಂಸ್ಕೃತಿಕ ಕ್ರೀಡಾ ಹಾಗೂ ತರಬೇತಿ ಸಂಸ್ಥೆ ಹಾಗೂ ಕರ್ನಾಟಕ ಉರ್ದು ಅಕಾಡೆಮಿ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವು ಸಹ ನಗರದ ಸಾಹಿತ್ಯ ಭವನದಲ್ಲಿ ಇದೇ ದಿ,26ರ ಶನಿವಾರ ರಾತ್ರಿ 9:00 ಗಂಟೆ ಗೆ ಎಕ್ ಶಾಮ್ ಸದ್ಭಾವನಾ ಕೇ ನಾಮ್, ಎಂಬ ಶಿರೋನಾಮೆ ಅಡಿಯಲ್ಲಿ ಅಖಿಲ ಭಾರತ ಕವಿ ಸಮ್ಮೇಳನ ಹಾಗೂ ರಾಷ್ಟ್ರೀಯ ಮುಶಾಯಿರಾ ಕಾರ್ಯಕ್ರಮ ಜರುಗಲಿದೆ ಸದರಿ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಪಾಲ್ಗೊಂಡು ಯಶಸ್ವಿಗೊಳಿಸ ಕೊಡಬೇಕೆಂದು ಸಮಾಜದ ಯುವ ನಾಯಕ ಉದ್ಯಮಿ ಹಬೀಬ್ ಖಾನ್ ರವರು ಮನವಿ ಮಾಡಿಕೊಂಡಿದ್ದಾರೆ.

ಸಮಾರಂಭದಲ್ಲಿ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಚೈತನ್ಯಾನಂದ ಸ್ವಾಮೀಜಿ, ಎಡಿಜಿಪಿ ಎಂ ನಂಜುಂಡಸ್ವಾಮಿ, ಕರ್ನಾಟಕ ಉರ್ದು ಅಕಾಡೆಮಿಯ ಅಧ್ಯಕ್ಷರಾದ ಮುಫ್ತಿ ಮೊಹಮ್ಮದ್ ಅಲಿ ಖಾಜಿ ರವರು ಪಾಲ್ಗೊಳ್ಳಲಿದ್ದಾರೆ, ಜಿಲ್ಲೆಯ ಉಸ್ತುವಾರಿ ಸಚಿವರು ಸಂಸದರು ಶಾಸಕರು ಇತರ ಜನ ಪ್ರತಿನಿಧಿಗಳು ವಿಶೇಷ ಆಮಂತ್ರಿಕರಾಗಿ ಪಾಲ್ಗೊಳ್ಳಲಿದ್ದು ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದ ಉರ್ದು ಮತ್ತು ಹಿಂದಿ ಕವಿ ಹಾಗೂ ಕವಿಯತ್ರಿಗಳು ಪಾಲ್ಗೊಂಡು ತಮ್ಮ ಕವನ ವಾಚನ ಮಾಡಲಿದ್ದಾರೆ, ಬದಿಯುದ್ದಿ ನವೀದ ರವರು ಕಾರ್ಯಕ್ರಮದ ನಿರೂಪಣೆ ಮಾಡಲಿದ್ದಾರೆ ಕಾರಣ ಕೊಪ್ಪಳ ಜಿಲ್ಲೆ ಮತ್ತು ಸುತ್ತಮುತ್ತಲಿನ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ಸಿಗೊಳಿಸಬೇಕೆಂದು ಹಬೀಬ್ ಖಾನ್ ಸಪ್ರಕಟಣೆ ಯ ಲ್ಲಿ ತಿಳಿಸಿ ಸರ್ವರನ್ನು ಸ್ವಾಗತಿಸಿದ್ದಾರೆ.



## 'ಪತ್ತಿನ ಸಹಕಾರ ಬ್ಯಾಂಕ್ ಎಂಬುದು ಗ್ರಾಮದಲ್ಲಿ ಶ್ರೀ ಲಕ್ಷ್ಮಿ ದೇವಸ್ಥಾನ ಕಟ್ಟಿದಂತೆ ಶಿವಗಂಗಾ ಶ್ರೀಗಳ ಅಭಿಮತ'

# ಗುಡೂರಲ್ಲಿ ಶ್ರೀ ವೀರಮಾಹೇಶ್ವರಿ ಬ್ಯಾಂಕ್ ಉದ್ಘಾಟಿಸಿದ: ಶಿವಗಂಗಾ ಶ್ರೀ

**ಕೆಲೂರ :** ಗುಡೂರ ಎಸ್ಸಿ ಗ್ರಾಮದ ಹೊಳೆಪ್ಪ ರಾಂಪುರ್ ಕಾಂಪ್ಲೆಕ್ಸ್ ದಲ್ಲಿ, ಹುನಗುಂದ ನಗರದ ಪ್ರತಿಷ್ಠಿತ ಶ್ರೀ ವೀರ ಮಾಹೇಶ್ವರಿ ಪತ್ತಿನ ಸಹಕಾರ ಸಂಘವು ನೂತನ ದ್ವಿತೀಯ ಶಾಖೆ ಪ್ರಾರಂಭ ಸಂಭ್ರಮೋತ್ಸವ ಕಾರ್ಯಕ್ರಮ ಜರುಗಿತು.

ಶಿವಗಂಗಾ ಕ್ಷೇತ್ರದ ಡಾ, ಮಲಯ ಶಾಂತಮುನಿ ದೇಶಿ ಕೇಂದ್ರ ಶಿವಾಚಾರ್ಯ ಶ್ರೀಗಳು ದಿವ್ಯ ಸಾನಿಧ್ಯ ವಹಿಸಿ ಗುಡೂರ ಗ್ರಾಮದಲ್ಲಿ ನೂತನ ದ್ವಿತೀಯ ಶಾಖೆಯನ್ನು ಬೆಳೆಯುವ ಸಸಿಗೆ ನೀರುಣಿಸುವುದರ ಮುಖಾಂತರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪೂಜ್ಯರು, ವೀರ ಮಾಹೇಶ್ವರಿ ಪತ್ತಿನ ಸಹಕಾರ ಸಂಘ ಸಂಸ್ಥೆ ಪ್ರಾರಂಭವೆಂಬುದು ಗ್ರಾಮದಲ್ಲಿ ಲಕ್ಷ್ಮೀ ದೇವಸ್ಥಾನ ಕಟ್ಟುತ್ತಿದ್ದೀವಿ ಅಂತ ಅರ್ಥ, ಬದುಕಿಗೆ ಸರಸ್ವತಿ ದೇವಿ ಎಷ್ಟು ಮುಖ್ಯಳೋ ಅಷ್ಟೇ ಲಕ್ಷ್ಮೀದೇವಿನೂ ಅಷ್ಟೇ ಮುಖ್ಯ, ಜ್ಞಾನ ನೀಡುವ ಸರಸ್ವತಿ ನಿಶ್ಚಲ, ಲಕ್ಷ್ಮಿ ಚಂಚಲ, ಇವರಿಬ್ಬರು ಹೀಗಿದ್ದರೆ ಸರಿ, ಸರಸ್ವತಿ ನಿಶ್ಚಲವಾಗಿಯೇ ಇರಬೇಕು, ಲಕ್ಷ್ಮಿ ಚಂಚಲವಾಗೆ ಇರಬೇಕು, ಸರಸ್ವತಿ ನಿಶ್ಚಲವಾಗಿರಬೇಕೆಂದರೆ ಜ್ಞಾನ ನೀಡುವ ಮುಕ್ತ ವ್ಯವಸ್ಥೆಗೆ ಶಾಂತಿ ನೆಮ್ಮದಿ ಏಕಾಗ್ರತೆ ತಂದು ಕೊಡುವ ಶಕ್ತಿ ದೇವತೆಯಾಗಿದ್ದಾಳೆ, ಹಾಗಂತ ಲಕ್ಷ್ಮೀ ನೂ ಒಂದು ಕಡೆ ನಿಶ್ಚಲವಾಗಿ ಇರಲಿಕ್ಕಾಗದು,ಅವಳಿಲ್ಲದೆ ವಹಿವಾಟು ನಡೆಯದು ಹಲವು ಹತ್ತು ಕಡೆ ಸುಳಿದಾಡಲೇ ಬೇಕು, ಲಕ್ಷ್ಮಿ ಸಂಚಾರದಲ್ಲಿದ್ದರೆ ಮಾತ್ರ ಆರ್ಥಿಕ ವಹಿವಾಟು ಬೆಳೆದು ಚಲಾವಣೆ ಇರಲು ಸಾಧ್ಯ ಎಂದರು.



ಬ್ಯಾಂಕ್ ವ್ಯವಹಾರ ಎಷ್ಟೇ ಕಷ್ಟವಾಗಲಿ, ಸಮಯಕ್ಕೆ ಸರಿಯಾಗಿ ಮರುಪಾವತಿಗೊಳ್ಳಲಿ, ಮತ್ತೊಬ್ಬರಿಗೆ ವಿನಿಯೋಗವಾಗುವಂತೆ ಬಳಸಿಕೊಳ್ಳುವರಾಗಿರಿ, ಪತ್ತಿನ ಸಹಕಾರ ಬ್ಯಾಂಕು ಆಪತ್ತಿಗೆ ಸಹಕಾರ ನೀಡಲು ಬದ್ಧವಾಗಲಿ, ಆರ್ಥಿಕ ವ್ಯವಸ್ಥೆ ಶೋಷಿತರ ಬದುಕು ಕಟ್ಟುವುದರೊಂದಿಗೆ ಹೆಚ್ಚು ಪ್ರಗತಿ ಹೊಂದಲಿ, ಆಡಳಿತ ಮಂಡಳಿ ಸಿಬ್ಬಂದಿ ಶುದ್ಧ ಹಸ್ತ ಸೇವೆಯಿಂದ ಇದರ ಬೆಳವಣಿಗೆ ತೋರಿಸಲು ಸಾಧ್ಯ ಎಂದರು. ನಾಡಿನಲ್ಲಿ ನೂರಾರು ಶಾಖೆಗಳು ಆರಂಭಗೊಳ್ಳಲಿ ಎಂದು ಶುಭ ಹಾರೈಸಿದರು.

ಭಾರತ ದೇಶ ಒಂದು ಕಡೆ ಕುಬೇರರು ಇನ್ನೊಂದು ಕಡೆ ಕುಚೇಲರು ಇರುವಂತಹ ದೇಶ, ಭಹುಶ ಕುಬೇರರು ಕುಚೇಲರು ಹೇಗೆ ಎಂದರೆ? ಬಡವರು ಸಾಲ ಸೋಲಾ ಮಾಡಿ ಮಕ್ಕಳ ಮದುವೆ ಮುಂಜಿ ಮಾಡಿ ಆ ಸಾಲದ ಕೂಪದಲ್ಲಿ ಸಾಯುವವರು ಇದ್ದಾರೆ,ಅವರು ಒಂದೆರಡು ಆಕಳಸಾಕಬೇಕೆಂದರೆ ಆರ್ಥಿಕ ಹಿನ್ನೆಲೆಯಿಂದ ಸಾಕಲು ಆಗದವರು ಇರುವವರು, ಇದೇ ದೇಶದಲ್ಲಿ ಒಂದು ನಾಯಿ ಸಾಕಲಿಕ್ಕೆ 25, ಲಕ್ಷ ಕಾರನ್ನು ಇಟ್ಟು ಸಾಕುವ ಶ್ರೀಮಂತರು ಇದ್ದಾರೆ,ಕಾರಣಇಷ್ಟೇಭಗವಂತಕೊಟ್ಟಸಂಪತ್ತಿನಲ್ಲಿಇದ್ದವರು ಇಲ್ಲದವರ ಜೊತೆ ಹಂಚಿಕೊಂಡು ಬಾಳುವವರಾಗಿರಿ, ಇಂತಹ ಮಾನವೀಯತೆಯ ಸೇವೆಯಿಂದ ಮಾತ್ರ ನಿಜವಾದ ಸಾರ್ಥಕ ಬದುಕು ಕಟ್ಟಿಕೊಳ್ಳಲು ಸಾಧ್ಯವೆಂದು ಆಶೀರ್ವಚನ ನೀಡಿದರು.

ಶಾಂತಯ್ಯ ಎಸ್ ಮಠ ಅಧ್ಯಕ್ಷತೆ ವಹಿಸಿದ್ದರು, ಎಂಎಸ್ ಮಠ, ಅಧ್ಯಕ್ಷ ವೆಂಕಟೇಶ್ ಕುಲಕರ್ಣಿ, ಉದ್ಯಮಿ ಮಲ್ಲಿಕಾರ್ಜುನ ವಸ್ತ್ರದ, ಮಾಂತಯ್ಯ ಗಚ್ಚಿನಮಠ, ಪ್ರಭುಸ್ವಾಮಿ ವಸ್ತ್ರದ, ಗುರುಬಸಯ್ಯಕಂಬಾಳೆಮಠ,ರಾಜಶೇಖರ್‌ಕೂಡಲಗಿಮಠ, ಹೊಳೆಯಪ್ಪ ರಾಂಪುರ, ಸರೋಜಿನಿ ಮಠ, ವಿಶಾಲಾಕ್ಷಿ ಯಾವಗಲ್ಲಮಠ, ಶ್ರೀಧರ್ ಜಿತುರಿ ಮುತ್ತಣ್ಣ ಕಿಲ್ಲೇದ, ದೊಡ್ಡ ಬಸಯ್ಯ ಹಿರೇಮಠ, ವಿಜಯ ಮಾಂತೇಶ್ ಹಿರೇಮಠ, ಇನ್ನು ಅನೇಕರು ಉಪಸ್ಥಿತರಿದ್ದರು.

ಉಪಾಧ್ಯಕ್ಷರಾದ ವಿ ಎಸ್ ಕಿಚಡಿಮಠ ಪ್ರಾಸ್ತಾವಿಕ ಹೇಳಿದರು, ಮುಖ್ಯ ಗುರು ಆರ್ ಬಿ ಮುದೇನೂರು ನಿರೂಪಿಸಿದರು, ವಿರುಪಾಕ್ಷಯ್ಯ ಯಾವಗಲ್ ಮಠ ವಂದಿಸಿದರು.

# ಅಪಾಯದ ಅಂಚಿನಲ್ಲಿರುವ ಹೇಮಾವತಿ ಎಡದಂಡೆ ನಾಲೆ



**ಕೆ.ಆರ್.ಪೇಟೆ:** ತಾಲ್ಲೋಕಿನ ಸಾರಂಗಿ ಬಳಿಯಲ್ಲಿರುವ ಹೇಮಾವತಿ ಎಡದಂಡೆ ನಾಲೆಯು ಮೊನ್ನೆ ಸುರಿದ ಬಾರಿ ಮಳೆಯಿಂದ ಮೊದಲೇ ಶಿಥಿಲ ವ್ಯವಸ್ಥೆಯಲ್ಲಿರುವ ನಾಲೆ ಒಡೆದು ಹೋಗುವ ಬೀತಿ ಎದುರಾಗಿದೆ ಹೌದು,ಹಲವು ವರ್ಷಗಳ ಹಿಂದೆ ಏರಿ ಒಡೆದು ಅನಾಹುತ ಸೃಷ್ಟಿಸಿದ ನಾಲೆ.

ಈ ಕಾಲುವೆ ಏರಿ ಒಡೆದು ಹೋದರೆ ಮೆಣಸ ಕೆರೆ, ಅಗ್ರಹಾರ ಬಾಚಹಳ್ಳಿ ಕೆ.ಆರ್.ಪೇಟೆ, ಚೌಡೇನಹಳ್ಳಿಯ ಕೆರೆಗಳು ನಿರಂತರವಾಗಿ ಹೊಡೆದು ಹೋಗುವ ಆತಂಕ ಎದುರಿಗಿದ್ದು ರೈತರು ಕಂಗಾಲಾಗಿದ್ದಾರೆ,ಇದಕ್ಕೆ ಸಂಬಂಧಿಸಿದಂತೆ ಕೂಡಲೇ ನೀರನ್ನು ತಗ್ಗಿಸುವ ಮೂಲಕ ಕಾಲುವೆ ಒಡೆಯುವ ಅಪಾಯವನ್ನು ತಪ್ಪಿಸಬೇಕೆಂದು ರೈತರ ಆಗ್ರಹಿಸಿದ್ದಾರೆ.

**ವರದಿ: ಎಸ್ ರವಿ ಹೊನ್ನೇನಹಳ್ಳಿ**

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State